ದುಂಬುಡು ಪೋವೆರೆ ಪಂಡ್‌ದ್ ಪಿರಾಉಡ್ದು ಕೆರ್ವೆ ಯಿ ಉಪಕಾರೊ ಮಳ್ತ್ಂಡಲಾ ಅಪಕಾರೊನೇ ನಿನೆಪುವೆ ಐಡ್ದಾವ ಆಯನ್ ತಿಳ್‌ತ್ ಪಾಡ್‌ಲಾ। ಯಾನ್ ಉಂಬ್ಯನಿ ತಿಂದ್‌ದ್ ಸುಖೊಡ್ದಾವ ಪೋಪೇ ಯಿಲಾ ನಿನ ಜಾಗೆಗ್ ಪೋಲಾ। ಬಲ್ಲೂಕೆ ಪಣ್‌ಪುಂಡು ಯಿಂಬ್ಯೆ ಯೆಂಚಿನಾಯೆ ಆವಡ್। ಶರಣಾಗತೆ ಆದಿತ್ತಿನಾಯೆ। ಯಿಂಬ್ಯನಿ ತಿಳ್‌ತ್ ಪಾಡುಜ್ಜಿ। ಶರಣಾಗತೆ ಆಯಿನಾಯನಿ ತಿಳ್‌ತ್ ಪಾಡುನಾಲು। ಬಾಳೊ ಪಾಪೊಂದುದು ಪಣ್‌ಪುಂಡು। ವಿಶ್ವಾಸೊಡು ಘಾತಕೊ। ಶರಣಾಗತಗ್ ಘಾತಕ ಮಳ್ತಿನಾಯೆಲಾ। ಭಯಂಕರೊ ಆದಿತ್ತಿ ನರಕೊಡು ಬೂಳುವೇರ್। ಸೂರ್ಯಚಂದ್ರಾದಿಳು ಉಪ್ಪುಣ್ಯಾತ್ ಪೊಲ್ತು। ಅನಂತರೊ ಅರಸುಮಗೆ ಯಚರಿಕೆ ಆಯೆ। ಬಲ್ಲೂಕೆ ಪಣ್‌ಪುಂಡು। ವೋ ಅರಸುಮಗಾ ಯೇನ್ ವೊಂಜಿ ಕ್ಷಣೊ ನಿದ್ರೆಡ್‌ಪೆ। ಯಿ ಭ್ರಮೆ ಆವಡಾ। ಅಂಚ ಆವಡ್ ಅಂದ್‌ದ್ ಪಂಡೆ। ಅಪಗ ಬಲೂಕೆಲಾ ಅರಸು ಮಗ ಕೃತಾಳ್ ನಿದ್ರೆ ಮಳ್ತೆ। ಪಿಲ್ಲಿ ಪಣ್‌ಪುಂಡು ವೋ ಅರಸುಮಗಾ। ಆಯಡಾ ವಿಶ್ವಾಸ ಮಳ್ಪಡಾ। ಯಿ ಬಲ್ಲೂಕೆಲಾ ಉಗುರು ಆಯುಧೊ ಯಿತ್ತಿನಾಲು। ಅಂಚ ಪಣ್‌ತ್ತ್ಂಡ್। ಉಗುರು ಯಿತ್ತಿನ್ಯನಿ। ಕೋಡುಯಿತ್ತಿನಾಯನ್। ಆಯುಧೊ ಕೃಟ್ ಯಿತ್ತಿನಾಕುಳೆನ್। ಪೊಣುಜಾವೆಡಲಾ। ಅರಸುಳೆಯತ್ತಿ। ಕುಲೊಟುಲಾ ವಿಶ್ವಾಸ ಮಳ್ಪೆರೆ ಆಂದ್। ಬೊಕ್ಕೊಲಾ ಯಿ ಬಲೂಕೆ ಚಂಚಲ ಮನಸ್ಸ್ ಯಿತ್ತಿನಾಲು। ಆ ಕಾರಣೊಡ್ದಾವ ಆ ಬಲ್ಲೂಕ ದಯೊ। ಬಹಳ ಭಯ ಕೊರ್ಪುಣಾಲು। ಕ್ಷಣೊಟು ಕೋಪೊ ಕ್ಷಣೊಟು ಸಂತೋಸೋ। ವಿಶೇಷಡ್ದಾವ ಸಂತುಷ್ಟಿ। ಕ್ಷಣೊ ಕ್ಷಣೊಟು ಚಂಚಲ ಮನಸ್‌ದಾಕುಳೆ ದಯೊ ಬಾಳೊ ಪೋಡಿಗೆ ಯಿತ್ತಿನಾಲು ಯಿನನ್ ತಿಂದ್‌ದ್ ತಾನೇ ಉಪ್ಪುಂಡು। ಆ ಕಾರಣೊಡ್ದಾವ ಯಿಯೆ ಆ ಬಲ್ಲೂಕನ್। ತಿಳ್‌ತ್ ಪಾಡ್‌ಲಾ। ಯಾನ್ ಆ ಬಲ್ಲೂಕನ್ ತಿಂದ್‌ದ್ ಪೋಪೆ। ಯಿಲಾ ನಿನ ಪಟ್ಟಣೊಗು ಪೋಲಾ। ಅವೆನ್ ಕೇಂಡ್‌ದ್ ಅರಸುಮಗೆ। ತಿಳ್‌ತ್ ಪಾಡ್ಯರೆಗ್ಂದ್‌ದ್ ನೂಕನಾಗ। ಆ ಬಲೂಕೆ। ಮರತ ಉಳಾಯಿ ಯಿತ್ತಿ ಗೆಲ್‌ನಿ ಕೂಟೂ ಪತ್ತ್ಂಡ್। ಬೊಕ್ಕೊ ಆ ಬಲೂಕನ್ ಅರಸುಮಗೆ ತೂದು ಭಯೊ ಮಳ್ತೆ। ಬಲ್ಲೂಕೆ ಪಂಣಂಡ್। ವೋ ಪಾಪಿಷ್ಟಾ ದಾಯೆಗೋಡಾದ್। ಪೋಡಿವಾ। ದಾಯಿನಿ ಪೂರ್ವಾರ್ಜಿತ ಕರ್ಮ ಉಣೆರೆ ಉಂಡು ನಿಕ್ಕ್। ಐಡ್ದಾವ ಯಿ ಯಿಸಾಸಮಿರಾಯಂದ್‌ದ್। ಪಂಡ್‌ದ್ ಪಿಶಾಚಿ ಆಲಾ। ಅಯೆಡ್ದ್ ಬೊಕ್ಕೊ ಪುಲ್ಲೇರೆ ಪಿಲಿ ಆ ಮರತ ಮುದೇಲ್‌ಡ್ದ ಪೋಂಡು। ಬಲ್ಲೂಕೆ ಆ ಅರಸುಮಗಕ್ ಶಾಪ ಕೊರುದು। ತನ ಸ್ತಾನೊಗು ಪೋಂಡು। ಅರಸುಮಗೆಲಾ ಸಾಸಮಿರಾಯಂದ್‌ದ್ ಪಿಶಾಚಿ ಆದ್। ವೊನೊಟು ತಿರುಗುವೇ। ಆಪೊಳು ಕುದುರೆ ಅರಸುಮಗೆ ಯಿಜ್ಯಾಂದಿನಾಲು ಆದ್ ನಗರೊಗು ಪೋಂಡು। ಅರಸು ಮಗೆ ಯಿಜ್ಯಂದಿ ಕುದುರೆನಿ ಜನೊಕುಳು ತೂದು। ಅರಸುಳೆ ದುಂಬು ಬತ್ತ್‌ದ್ ಪಂಡೇರ್। ಆಪೊಳು ಮಂತ್ರಿನಿ ಲೆಪ್ಪಾದ್। ಪಣ್‌ಪೇರ್। ವೋ ಮಂತ್ರಿಯೇ ಯೇಪೋಳು। ಯನ ಮಗೆ ಮೃಗೊ ಬೇಟೆಗ್ ಪೋಯೆ ವೊನೊಕು। ಆಪೊಳು

ಬಹಳೊ ಅಪಶಕುನೊ ಆಂಡ್। ಆಲೋಚನೆ ಮಳ್‌ಪಂದೆ ಯಿಂಚ ಪೋಯೆ ಆಯಗ್। ಕಷ್ಟೊ ಆಯಿನಿ ಸ್ಯ। ಮಗಾ ಕುದುರೆ ಮಗೆದಾಂತೆನೇ ಬತ್ತ್‌ಂಡ್। ಆಯನ್ ನಾಡುಣೇಕ್ ಬೋಡಾದ್ ವನೊಕು ಪೋಯಿ। ಮಂತ್ರಿ ಪಂಡೆ। ಸ್ವಾಮೀ ಅಂಚ ಮಳ್ಪೆರೆ ತಕ್ಕ ಯಿತ್ತಿನಾಲು । ಆಪೊಳು ಅರಸುಳು ಮಂತ್ರಿಳೆಡ್ಡಾವ । ಪರಿವಾರೊಡ್ಡಾವ ವಾ ಮಾರ್ಗೊಡು ಮಗೆ ಪೋತೆನಾ ಆ ಮಾರ್ಗೊಡು। ಪೋದು ಕಾಡ್‌ದ ನಡೊಟು ತಿರ್‌ಂಗ್‌ದ್। ಅಳ್ಳ್ ಸಸೆಮಿರಾಯಂದ್‌ದ್ ಪಂಡೊಂಡುದಿತ್ತಿ। ಪಿಶಾಚಿ ಆಯಿ ಮಗನ್ ತೂದು। ಮಹಾ ದುಖೊನ್ಪಿ ಸಮುದ್ರೊಡು ಮುಳುಕುದು। ಆಯನ್ ಲೆತೊಣುದು ತನ ಪಟ್ಟಣೊಗು ಬತ್ತೆ। ಅಪಗ ಮಂತ್ರಿಡ್ಡಾವ ಮಂತ್ರ ಮಳ್ತ್‌ದ್ ತೆರಿನಾಕುಳೆನಿ ಲೆಪ್ಪಾದ್ ಆಕುಳೆಡ್ಡಾವ। ಚಿಕಿತ್ಸ ಮಳ್ಪಾಯೆಡಲಾ ಸ್ವಸ್ತ ಆಯಿಜ್ಜಿ। ಆ ಸಮಯೊಡು ಅರಸು ಮಂತ್ರಿಗ್ ಪಣ್‌ಪೆ। ವೋ ಮಂತ್ರಿಯೇ ಯಿೊ ಸಮಯೊಡು ಶರದಾನಂದೆ ಯಿತ್ತ್‌ದೆಡಾ। ಆಯೆ ಕ್ಷಣ ಮಾತ್ರೊಡ್ಡಾವ ಯಿಂಬ್ಯಕ್ ಚಿಕಿತ್ಸ ಮಳ್ತ್‌ದ್‌ವೇ। ಆಯೆ ಯನಡ್ಡಾವ ವ್ಯರ್ಥ ತ್ಯತ್ ಪೋಯೆ। ಬೊಕ್ಕೊಲಾ ಮನುಷ್ಯಡ್ಡಾವ ದಾಯಿನಿ ಕಾರ್ಯ ಮಳ್ತೆಂದ್‌ದ್। ವಿಚಾರಣೆ ಮಳ್ತ್ ಸೀಕ್ಷೆ ಮಳ್ಪೊಡು। ಅಂಚ ಮಳ್‌ತ್ತಿಜ್ಜಡಾ ಬಾಳೊ ಆಪತ್ತ್ ಬರ್ಪುಂಡು। ಪರೀಕ್ಷೆ ಮಳ್ಪಂದೆ ಸೀಕ್ಷೆ ಮಳ್ಪೆರೆ ಆವಂದ್। ಸಜ್ಜಿಡ್ ಪರೀಕ್ಷೆ ಮಳ್ತೊಣೊಡು ಬೊಕ್ಕೊ ಸಂತಾಪ ಆಪುಂಡು। ಆ ಸಮಯೊಡು ಯಿೊ ಪಿಶಾಚಿನಿ ನಿವಾರಣೆ ಮಳ್ಪುನಾಯೆ ಯಿಜ್ಜಿ। ಮಂತ್ರಿ ಪಂಡೆ ಆ ಸಮಯೊ ಅಂಚ ಯಿತ್ತ್‌ಂಡ್। ಅಯೆಡ್ಡಾವ ಆ ಸಮಯೊಡು ಅಂಚ ಬುಧಿ ಆಂಡ್। ಅರಸು ಪಂಣ್‌ಪೆ ಆಯಾ ಕಂರ್ಮಾನುಸಾರೊಡ್ಡಾವ ಆಂಡ್। ಯಿಸೆ ಆಯ ವಿಶಯೊಡು ಮಹಾಪ್ರಯತ್ನೊ ಮಳ್ಪೆರೆ। ತಕ್ಕ ಯಿತ್ತಿನಾಲು। ಮಂತ್ರಿ ಪಂಡೆ ಪಣ್‌ಲಾ ಯಂದ್‌ದ್। ಯೇರಾಂಡಲಾ ಯನ ಮಗಕ್ ಚಿಕಿತ್ಸ ಮಳ್ತೆಡಾ ಆಯಗ್ ಅರ್ಧ ರಾಜ್ಯೊ ಕೊರ್ಪುಂಡು ಅಂದ್‌ದ್ ಡಂಗುರ ಪೊಯಿಪಾವೊಡೊಂದುದು ಅರಸು ಪಂಡೆ। ಆ ಮಂತ್ರಿ ಸಜ್ಜಿಡ್ ಆಲೋಚನೆ ಮಳ್ತ್‌ದ್। ಅಂಚ ಮಳ್ಪಾದ್ ತನ ಯಿಲ್ಲಾಗ್ ಬತ್ತ್‌ದ್। ಶರದಾನಂದಾ ದುಂಬು ಆ ಮಾತ ಪುರೊತ್ರನಿ ಪಂಡೆ। ಮಾತ ಕೇಂಡ್‌ದ್ ಶರದಾನಂದೆ ಪಣ್‌ಪೆ। ವೋ ಮಂತ್ರಿ ಯಂಕ್ ವೊಂಜಿ ಕಂನಿಕೆ ಉಳ್ಳೊಳು ಆಳೆನಿ ತೂವೆರೆ ಆವಂದ್। ಆಳ್ ಯಿಂಬ್ಯಗ್ ದಾಯಿನಿ ಆಂಡಲಾ ಉಪಾಯ ಮಳ್ಪೊಳು। ಯಂದ್‌ದ್ ಅರಸು ದುಂಬು ಪಣ್ಲಾ ಅವೆನ್ ಕೇಂಡ್‌ದ್ ಅರಸು ದುಂಬು ಮಂತ್ರಿ ಅಂಚನೇ ಪಂಡೆ। ಆದಾಗ ಅರಸು ಮಾತ ಸಭೆ ಕೂಡಾವೊಣುದು। ಮಂತ್ರಿ ಯಿಲ್ಲ್‌ಗ್ ಬತ್ತ್‌ದ್ ಕುಳ್ಳುದೆ। ಆಯೆಡ್‌ದ್ ಬೊಕ್ಕೊ ಅರಸುಮಗೆ ಸಾಸಾಮಿರಾಯಂದ್‌ದ್ ಕುಳುದೆ । ಐನಿ ಕೇಂಡ್‌ದ್ ನೆಲಮಾಳಿಗೆಟ್ ಯಿತ್ತಿನಾಯೆ ವೊಂಜಿ ಶ್ಲೋಕೊ ಪಂಡೆ। ಭಾವಸುದೊಡು ಶರಣಾಗತೆ ಆಯಿನಾಯನಿ। ವಂಚನೆ ಮಳ್ತಿನಾಯೆ ಯೇರಾಂಡಲಾ। ಸಮರ್ಥೆನಾ। ತೊಡೆತ ಮಿತ್ತ್ ಜೆತ್‌ದ್ ನಿದ್ರೆ ಮಳ್ತಿನಾಯನಿ ಕೆರ್ಪುಣಾಲು। ಯಂಚಿ ಪೌರುಷೊ ಅವೆನ್ ಕೇಂಡ್‌ದ್ ಅರಸುಮಗೆ ನಾಲ್ ಅಕ್ಷರದ ಮದ್ಯೊಡು ವೊಂಜಿ ಅಕ್ಷರ ಪೋಂಡು।

ಸೇಮಿರಾಯಂದ್‌ದ್ ಪಂಡೆ। ಬೊಕ್ಕೊ ತಿರ್‌ಗಾ ರಡ್ಡನೇ ಶ್ಲೋಕೊ ಪಂಡೆ। ಗಂಗಾನದಿ ಸಾಗರೊಗು ಸಂಗಮ ಆದಿತ್ತಿ ಸಮುದ್ರದ ಸೇತ್ತುಗು ಪೋಂಡ । ಬ್ರಂಹ್ಮತ್ಯ ದುಂಬಾಯಿನಾಲು ಪೋಪುಂಡು। ಮಿತ್ರದ್ರೋಹ ಪೋಪುಜ್ಜಿ ಯನಪಿ ಶ್ಲೋಕೊನಿ ಕೇಂಡ್‌ದ್। ಮಿರಾಯಂದ್‌ದ್ ಪಂಡೆ। ಮೂಜೆನೆ ಶ್ಲೋಕೊ ಪಂಡೆ ಮಿತ್ರದ್ರೋಹೊ ಮಳ್ತಿನಾಯೆ। ಕೃತಘ್ನೊ ಮಳ್ತಿನಾಯೆ। ವಿಶ್ವಾಸೊಡು ಘಾತಕ ಮಳ್ತಿನಾಯೆ। ಯಿೊ ಮೂವೇರ್‌ಲಾ ಯಿೊ ಭೂಮಿಯಿಪ್ಪಿ ಮುಟುಲಾ ನರಕೊಗು ಪೋಪೇರ್। ಅಯೆಡ್ಡ್ ಬೊಕ್ಕೊ ವಂಜಿ ಅಕ್ಷರ ಪಂಡೆ। ನಾಲೆನೆ ಪದ್ಯೊನಿ ಪಂಡೆ ವೋ ಅರಸೇ। ನಿನ ಮಗಕ್ ಮಂಗಳ ಆವೊಡ್ಂದು ಯಿಥೆ ಮಳ್ತಡಾ। ಬಿರಣೇರೆಗ್ ದಾನ ಕೊರ್ಲ್। ವೊನೊಳೆಗ್ ಮಾತ ಬಿರಣೆನೇ ಗುರು। ಯಿಂಚ ಪಂಣಾಗ ಶರದಾನಂದೆಲಾ। ಅರಸುಮಗೆಲಾ ಸ್ವಸ್ತಸಾವದಾನ ಆಯೆ। ಅಯೆಡ್ಡ್ ಬೊಕ್ಕೊ ಅಂಮಾ ದುಂಬು ಬಲ್ಲೂಕ ಪೂರ್ವತ್ರೊಂನಿ ಪಂಡೆ। ಅವೆನ್ ಕೇಂಡ್‌ದ್ ಅರಸು ಶರದಾನಂದಗ್ ಪಣ್‌ಪೆ। ಗ್ರಾಮೊಡುತ್ತಿನಾಳೆಗ್। ವನೊಕು ಪೋತಿ ಮರ ಪ್ಪಿಲಿ ಮನುಷ್ಯೇರೆನಾಲು । ಪಾತೆರೊ ಯಂಚ ತೆರಿಂಡ್ ನೆಲಮಾಳಿಗೆಡ್ಡ್ ಶರದಾನಂದೆ ಪಂಡೆ। ದೇವೆರ್ ಬಿರಣೇರೆ ದಯೊಡ್ಡಾವ। ನಾಲಿಗೆಡ್ ಶಾರದೆ ಉಳ್ಳೋಳು । ಅಯೆಡ್ಡಾವ ಯಾನ್ ತೆರಿಪೆ । ಭಾನುಮತಿ ಶರೀರೊಡು ಯಿತ್ತಿನೇನ್ ಪಂಡಿ ಲೆಕ್ಕೊ। ಯಿೊ ಪಾತೆರೊ ಕೇಂಡ್‌ದ್ ಆಶ್ಚರ್ಯ ಯಿತ್ತಿನಾಯೆ ಆದ್ ಅರಸು। ನೆಲಮಾಳಿಗೆದ ಬಾಕಿಲ್ ಜಪ್ಪಾಯೆ। ಆಪೊಳು ಶರದಾನಂದೆ ತೂವೆರೆ ತಿಕ್ಯೆ। ಅರಸು ದುಂಬಾದಿತ್ತಿ ಮಾತೇರೆಡ್ಡ್‌ಲಾ ನಮಸ್ಕಾರ ಮಳ್ಪಾವೊಂಡೆ। ಆಪೊಳು ಮಂತ್ರಿ ಪೂರ್ವ ಉತ್ತಾಂತ ಅರಸುಗು ಪಂಡೇ। ಆ ಕಾಲೊಡು ಮಂತ್ರಿನಿ ಬಹಳೊ ಪ್ರಸಿದ್ಧಿ ಆಯಿನಾಯೆ ಅಂದ್‌ದ್ ಪಂಡೆ। ವೋ ಮಂತ್ರಿ ಯಿನ ಸಂಸರ್ಗೊಡ್ಡಾವ। ಅಪಕೀರ್ತಿ ದುರ್ಗತಿಲಾ ಪೋಂಡು। ಐಡ್ಡಾವಾ ಸಜ್ಜನೆರೆ ಸಂಗ ಮನುಷ್ಯೆ ಮಳ್ಪೆರೆ ತಕ್ಕ ಯಿತ್ತಿನಾಲು । ಐಡ್ಡಾವ ರಡ್ಡ್ ಪ್ರಯೋಜನಲಾ ಆಪುಂಡು ಅಂಚ ಉಂಡು। ಸಜ್ಜನೇರೆ ಸಂಗ ಬತ್ತಿ ಆಪತ್ತ್‌ನಿ ಬರ್ಪಿ ಆಪತ್ತ್‌ನಿಲಾ ಪರಿಹಾರ ಮಳ್ಪುಂಡು । ಭಾಗೇರತಿದ ತೀರ್ಥೊನಿ ಪರ್‌ಂಡಾ ಬಾಜೇಲ್‌ಲಾ ಪೋಪುಂಡು। ದುರ್ಗತಿಲಾ ಪೋಪುಂಡು। ಬೊಕ್ಕೊಲಾ ಮಹತ್ತಾದಿತ್ತಿ ಕಷ್ಟೊಡ್ಡಾವ ಯನ ಮಗನ್ ರಕ್ಷಣೆ ಮಳ್ತ್‌ದೆ। ಅರಸುಳು ಸಜ್ಜನೇರಾದಿತ್ತಿ । ಕುಲವಂತೆರಾದಿತ್ತಿ । ನಿಕ್ಕ್ ಸಮಾನೊಯಿನಾಕುಳೆನ್ ಸಂಗ್ರಹ ಮಳ್ಪೆರೆ ತಕ್ಕಯಿತ್ತಿನಾಲು। ಕುಲಾಂದಾಂತ್ತಿನಾಯನ್ ಸಂಗ್ರಹ ಮಳ್ಪೆರೆ ಆವಂದ್। ಮಾತ ಪಿಂದಿನಾಯನ್ ಶ್ಲಾಘನೆ ಮಳ್ಪೊಡು। ಯಿೊ ಪ್ರಕಾರೊ ಮಂತ್ರಿಗ್ ಬಹಳೊ ಸ್ತೋತ್ರ ಮಳ್ತ್‌ದ್ ಕುಂಟು ಮುದೆಲಾಯಿನೇಡ್ಡ್ ಮಂನಣೆ ಮಳ್ತ್‌ದ್ ಅರಸು ರಾಜ್ಯಾಭಾರ ಮಳ್ತೊಂಡುದು ಯಿತ್ತೆ। ಯಿೊ ಕಥೆನಿ ಮಂತ್ರಿ ಬೋಜರಾಜಗ್ ಪಂಡ್‌ದ್ ಬೊಕ್ಕೊಲಾ ಪಣ್‌ಪೆ । ವೋ ಅರಸೆ । ವಾ ಅರಸು ಮಂತ್ರಿ ಪಾತೆರೊನಿ ಕೇಣುವೆನಾ । ಆಯೆ ಆಯುಷ್ಯ ಯಿತ್ತಿನಾಯೆ ಆದ್ ಸುಖ ಯಿತ್ತಿನಾಯೆ ಆಪೆ। ಅದಾಗ ಭೋಜರಾಜೆ ಮಂತ್ರಿನಿ ಸ್ತೋತ್ರ ಮಳ್ತ್‌ದ್। ಕುಂಟು ದುಂಬಾಯಿನೇಡ್ಡಾವ ಮಂನಣೆ ಮಳ್ತ್‌ದ್।

ಆ ಸಿಂಹಾಸನೊನಿ ನಗರದ ಉಳಾಯಿ ಕೊಂಡತ್ತ್‌ದ್। ದೀಯೇ। ಯಿಂಚ ನಂದರಾಜ ಕಥೆ ಭೋಜರಾಜಗ್ ಸಿಂಹಾಸನ ತಿಕ್ಕಿನಾಲು। ಕಥೆ ಸಮಾಪ್ತಿ ಆಂಡ್॥ ಶ್ರೀ ಶ್ರೀ ಶ್ರೀ ॥॥ ಶ್ರೀ ಶ್ರೀ ಶ್ರೀ ॥ ॥ ಶ್ರೀ ಶ್ರೀ ಶ್ರೀ ॥ ॥ ಶ್ರೀ ಶ್ರೀ ಶ್ರೀ ॥

ಬೊಕ್ಕೊ ಭೋಜರಾಜೆ ಅಳ್ಳ್ ಸಾವಿರ ಕಂಭೊದ ಮಂಟಪೊನಿ ಮಳ್ಪಾದ್ ಯೆಡ್ಡೆ ಮುಹೂರ್ತೊಡು ಮಂಟಪೊಡು ಸಿಂಹಾಸನ ಸ್ತಾಪನೆ ಮಳ್ತ್‌ದ್। ಐಡ್ದ್ ಬೊಕ್ಕೊ ತೀರ್ಥದ ನೀರ್‌ಡ್ । ಯೆಡ್ಡೆ ಆದ್ ಮಂತ್ರ ದುಂಬಾಯಿನೇಡ್ಡಾವ ಬಿರಣೇರೆಡ್ಡಾವ ಅಭಿಷೇಕ ಮಳ್ಪಾವಂಡೆ। ಪೊಣ್ಣುಜಾಲುಳು ಆರತಿ ಮಳ್ತೇರ್। ಅರಸುಳು ಆರಾಧನೆ ಮಳ್ತೇರ್। ಪಾಟಕೇರೆಡ್ಡಾವ ಸ್ತೋತ್ರ ಮಳ್ಪಾವೊಂಡೆ। ನಾಲ್ ವರ್ನೊಳೆನ್ ದಾನಮಾನೊಳೆಡ್ಡಾವ ಮಂನಣೆ ಮಳ್ತ್‌ದ್। ದೀನರೆನಿ। ಕುರುಡೇರೆನಿ। ಕೆಪ್ಪೇರೆನಿ। ಕುಬ್ಜೇರ್ ದುಂಬಾದಿತ್ತಿನಾಕುಳೆಗ್। ದಾನೊ ಕೊರುದು ಚತ್ರ ಚಾಮರೊಡ್ಡಾವ। ಯುಕ್ತೆ ಆದ್ ಪುತ್ತೊಳಿದ ತರೆತ ಮಿತ್ತ್। ಪಾದೊ ಕಮಲೊನಿ ದೀನಗ ಆಪೊಳು ಪುತ್ತೊಳಿಲಾ ಅರಸುನಿ ತೂದು ಕೇಣುಂಡು । ವೋ ಅರಸೇ ನಿಕ್ಕ್ ವಿಕ್ರಮಾರ್ಕಗ್ ಸಮಾನ ಆದಿತ್ತಿ ಪರಾಕ್ರಮೊ ಔದಾರ್ಯೊ ದುಂಬಾಯಿನ್ಯಾಲು। ಯಿಂನಳ್ಳ್ ಉಂಡಡ ಯಿೊ ಸಿಂಹಾಸನೊಡು ಕುಳ್ಳುಲಾ। ಅರಸು ಪಂಡೇ। ವೋ ಪುಥೊಳಿ। ಯಿೊ ಪಂಡಿ ಮಾತ ಔದಾರ್ಯ ಗುಣೊಳೆಡ್‌ದಾವ ಕಡಮೆ। ಉಂಡೋ ದಾಯಿನಿ। ಯೇನ್‌ಲಾ ಮಾತೇರೆಗ್ ಬೋಡಾಯಿನೇನ್ । ಕಾಲೊಡು ಉಚಿತ್ತಾ ಆಯಿನೇನ್ ಕೊರ್ಯೆ। ಪುಥೊಳಿ ಪಣುಪುಂಡು । ವೋ ಅರಸೇ ಉಂದೇ ಅಯೋಗ್ಯ ಆದಿತ್ತಿನಾಲು। ಯೇಪೊಳು ತಾನ್ ಕೊರ್ನನ್ ತನ ಬಾಯಿಡ್ ಪಣ್‌ಪೆನೋ। ಯೇರ್ ತನ ಗುಣೊ ಊರ್ರ್ಯಾಯು ಅವಗುಣೊನಿ ಪಣ್‌ಪೆನಾ । ಆಯೆ ಕೇವಲ ದುರ್ಜನೆನೇ ಸಯಿೊ। ಸಜ್ಜನೆ ಅಂಚ ಪಣ್‌ಪುಜ್ಜೆ। ತನ ಗುಣೊನಿ ಊರ್ರ್ಯಾಯ ಅವಗುಣೊನಿ ಪಣ್ಯೆರೆ ಸಮರ್ಥೆ ಆಪುಜ್ಜೆ। ಸಜ್ಜನೆ ಬೊಕ್ಕೊಲಾ ಪಣಾಲು । ಆಯುಷ್ಯ ಯಿಲ್ಲ್‌ದ ಚುದ್ರ। ಮಂತ್ರೊ ಮಳ್‌ದ್। ಅಂತರಂಗೊ ದಾನೊ ಮಾನೊ ಅವಮಾನೊ। ಯಿೊ ವೊಂಬ್ರ್ ಬಗೆ ಗೋಪ್ಯ ಆಯಿನಾಲು। ಬೊಕ್ಕೊಲಾ ಪಣಾಲು ಹಾನಿ। ಮನಸ್ತಾಪೊ। ಯಿಲ್ಲ್‌ಡ್ ದುಶ್ಚರಿತೆಲಾ ವಂಚನೆ। ಅವಮಾನೊಲಾ ಬುಧಿವಂತೆ ಪಣಯೆ। ತನ ಗುಣೊ ತಾನ್ ಪಣೆರೆಗಾವಂದ್। ಊರ್ರ್ಯಾಯ ನಿಂದೆ ಮಳ್ಪೆರೆ ಆವಂದ್। ಯಿಂಚ ಪುಥೊಳಿ ಪಂಣ್ಯೆನ್ ಕೇಂಡ್‌ದ್। ಆಶ್ಚರ್ಯ ಯಿತ್ತಿನಾಯೆ ಆದ್। ಭೋಜರಾಜೆ ಪುಥೊಳಿಡ ಕೇಂಡೇ। ವೋ ಪುಥೊಳಿಯೇ ಯಿೊ ಸತ್ಯ ಪಂಡಾ। ಯೇರ್ ಸತ್ಯೊ ತನ ಗುಣೊನಿ ಪಣ್‌ಪೆ ಆಯೆ ಮೂರ್ಖೆ। ಯಾನ್ ಯನ ಗುಣೊನಿ ಪಂಡೆ ಅಲು ಅಯೋಗ್ಯ ಆಯಿನಾಲು। ಆ ಸಿಂಹಾಸನೊಡು ಕುಳಿದಿನಾಯ ಅಲುದಾರ್ಯ ಗುಣೊಳೆನಿ ಪಣ್ಲಾ। ಪುತ್ತೊಳಿಕೆ ಪಣ್‌ಪುಂಡು। ವೋ ಅರಸೇ ಯಿೊ ಸಿಂಹಾಸನೊ ವಿಕ್ರಮಾರ್ಕನಾಲು। ಅರ್ಥಿಳೆಗ್ ಕೋಟಿ ಸುವರ್ನೊನಿ ಕೊರ್ತೆ ॥ ೦ ॥

[ಉಂದೆತ ದುಂಬುದ ಭಾಗ ತಿಕ್ಕ್‌ತಿಜ್ಜ]

ವಿಕ್ರಮಾರ್ಕ ಕಥೆ
ಕನ್ನಡ ಕಥಾರೂಪ

ಕನ್ನಡದ ಓದುಗರಿಗೆ ತುಳು ವಿಕ್ರಮಾರ್ಕ ಕಥೆಯ ಕಥಾ ಹಂದರದ ಸ್ವರೂಪವನ್ನು ಪರಿಚಯಿಸುವುದು ಈ ಭಾಗದ ಉದ್ದೇಶವಾಗಿದೆ. ಇದು ಯಥಾವತ್ ಅನುವಾದವಲ್ಲ. ಅರ್ಥ ಸ್ಪಷ್ಟನೆಗಾಗಿ ಅಗತ್ಯ ಕಂಡಲ್ಲಿ ತುಸುಮಟ್ಟಿಗೆ ಮಾತ್ರ ಸೂಕ್ತವಾದ ಬದಲಾವಣೆ ಮಾಡಿಕೊಳ್ಳಲಾಗಿದೆ. ಸರಳವಾಗಿ ಮೂಲದ ಲಯವನ್ನು ಕಾಯ್ದುಕೊಂಡು ಕೆಲವೆಡೆ ವಾಕ್ಯಗಳನ್ನು ಸಂಕ್ಷಿಪ್ತಗೊಳಿಸಲಾಗಿದೆ. ಅದಕ್ಕಾಗಿ ಮೂಲದಲ್ಲಿದ್ದ ಅಂದಿನ ಬಳಕೆಯ ಪದಗಳನ್ನು ಉಳಿಸಿಕೊಳ್ಳಲಾಗಿದೆ. ಹಾಗೆಯೇ ಅಗತ್ಯವೆನಿಸಿದಲ್ಲಿ ತುಸು ವಿವರಣಾತ್ಮಕ ಧಾಟಿಯನ್ನು ಅನುಸರಿಸಲಾಗಿದೆ. – ಸಂ

ಅನಾದಿ ಕಾಲದಿಂದಿರುವ, ಪುರಾಣ ಪುರುಷನಾದ, ಕಮಲದಲ್ಲಿ ಜನಿಸಿದ ಬ್ರಹ್ಮದೇವರನ್ನೂ ಪಾರ್ವತಿಯ ಮಗನನ್ನೂ, ಭಾಗ್ಯವಿರುವ ಸರಸ್ವತಿಯನ್ನೂ ವಂದಿಸಿ ವಿಕ್ರಮಾರ್ಕ ಕಥೆಯನ್ನು ಹೇಳುವೆ. ಕೈಲಾಸ ಪರ್ವತದಲ್ಲಿರುವ ಪರಮೇಶ್ವರನ ಬಳಿ "ಬುದ್ಧಿವಂತನಿಗೆ ದೇವರ ಚರಿತ್ರೆಯಲ್ಲಿ ಕಾಲಕ್ಷೇಪವಾಗುವುದು, ಇತರ ಮೂರ್ಖರಿಗೆ ನಿದ್ರೆಯಲ್ಲಿ ನ್ಯಾಯ ಮಾಡಿಯಾದರೂ ಹೊತ್ತು ಹೋಗುವುದು, ಆದ್ದರಿಂದ ಸಕಲ ಜನರ ಮನಸ್ಸಿಗೆ ಆಶ್ಚರ್ಯವೆನಿಸುವ ಕಥೆಯನ್ನು ಹೇಳು" ಎಂದು ಲೋಕಕ್ಕೇ ತಾಯಿಯಾಗಿರುವ ಪಾರ್ವತಿಯು ಕೇಳಿದಳು. ಆಗ ಪರಮೇಶ್ವರನು ಎಲ್ಲರ ಮನಸ್ಸಿಗೆ ಸಂತೋಷವಾಗುವ ಕಥೆಯನ್ನು ಹೇಳುತ್ತೇನೆಂದು ಪಾರ್ವತಿಗೆ ಹೇಳುತ್ತಾನೆ.

ಇಂದ್ರಲೋಕವನ್ನು ಸೋಲಿಸುವಂತಿದ್ದ ಉಜ್ಜಯಿನೀ ಎಂಬ ಪಟ್ಟಣದಲ್ಲಿ ಮಂತ್ರಿಗಳು ಉದ್ಯೋಗಸ್ಥರೊಂದಿಗೊಡಗೂಡಿ ಭರ್ತೃಹರೀಯೆಂಬ ಅರಸನಿದ್ದನು. ಆತನು ಸಕಲ ಶಾಸ್ತ್ರವನ್ನೂ ತಿಳಿದಂತವನು. ಆತನ ತಮ್ಮ ವಿಕ್ರಮನೆನ್ನುವವನು. ಆ ವಿಕ್ರಮನು

ಶತ್ರುಗಳ ಪರಾಕ್ರಮವನ್ನು ಅಪಹರಿಸುವಂತವನು. ಭರ್ತೃಹರಿಯ ಮಡದಿ ಅಂದಚೆಂದಗಳಲ್ಲಿ ದೇವತೆಗಳನ್ನು ಸೋಲಿಸುವಂತವಳು. ಆಕೆಯ ಹೆಸರು ಅನಂಗಸೇನೇ.

ಆ ಪಟ್ಟಣದಲ್ಲಿ ಸಕಲ ಶಾಸ್ತ್ರವನ್ನು ಅರಿತ, ಮಂತ್ರಶಾಸ್ತ್ರ ಚೆನ್ನಾಗಿ ಬಲ್ಲ, ಬಹು ಬಡವನಾದ ಬ್ರಾಹ್ಮಣನೊಬ್ಬನಿದ್ದನು. ಆತ ಮಂತ್ರ ಭಜನೆಗಳ ಮೂಲಕ ಭುವನೇಶ್ವರಿಯನ್ನು ಸಂತೋಷ ಪಡಿಸಿದನು. ಆ ದೇವತೆ ಪ್ರತ್ಯಕ್ಷವಾಗಿ "ಓ ಬ್ರಾಹ್ಮಣಾ, ನಿನ್ನ ಮಂತ್ರ ಭಜನೆಗೂ, ನಿನ್ನ ಭಕ್ತಿಗೂ ನಿನಗೆ ಸಿದ್ಧಿಯಾದೆ. ವರವನ್ನು ಕೇಳಿಕೋ" ಎಂದಾಗ ಆತ ತನಗೆ ಹುಟ್ಟು ಸಾವುಗಳೆರಡೂ ಇಲ್ಲದಂತೆ ಮಾಡೆಂದು ವರವನ್ನು ಕೇಳಿಕೊಂಡ. ಆಗ ದೇವತೆ ಒಂದು ಉತ್ತಮ ಮಾವಿನ ಹಣ್ಣನ್ನು ನೀಡಿ "ಓ ಮಗನೇ, ಈ ಫಲವನ್ನು ತಿನ್ನು – ಹುಟ್ಟು ಸಾವುಗಳು ಇಲ್ಲದಂತೆ ಆಗುತ್ತದೆ" ಎಂದಳು.

ಆತ ಆ ಫಲವನ್ನು ಹಿಡಿದುಕೊಂಡು ಮನೆಗೆ ಬಂದು ದೇವರ ಪೂಜೆಯನ್ನು ಮಾಡಿ ಆ ಫಲವನ್ನು ತಿನ್ನಲೆಂದು ತೆಗೆದಾಗ ಆತನ ಮನಸ್ಸಿಗೆ ಹೀಗೆ ತೋಚಿತು: 'ನಾನು ದಟ್ಟ ದರಿದ್ರನಾಗಿರುವುದರಿಂದ ಯಾರಿಗೆ ಉಪಕಾರ ಮಾಡಿಯೇನು? ಇನ್ನೂ ಬಹಳ ವರ್ಷ ಬದುಕಿದರೂ ಬೇಡಿಕೊಂಡೇ ಇರಬೇಕು. ಅದರಿಂದಾಗಿ ಪರೋಪಕಾರ ಮಾಡುವ ಮನುಷ್ಯನಿಗೆ ನೀಡಿದರೆ ಆ ಫಲ ಸಾರ್ಥಕವಾಗುತ್ತದೆ. ಒಡವೆ ವಸ್ತುವಿದ್ದ ನಿಪುಣನಾದ ಮನುಷ್ಯ ಒಂದು ಕ್ಷಣವಾದರೂ ಬದುಕಿದರೆ ಆತ ಬದುಕಿದ್ದು ಸಾರ್ಥಕವಾಗುತ್ತದೆ ಮತ್ತು ಯಾರಾದರೂ ಒಂದು ಕ್ಷಣವಾದರೂ ಬುದ್ಧಿವಂತನಾಗಿ ಪರಾಕ್ರಮ ಐಶ್ವರ್ಯ ಮೊದಲಾದ ಗುಣಗಳಿಂದ ಬದುಕಿದರೆ ಆ ಮನುಷ್ಯ ಬದುಕಿದ್ದು ಸಾರ್ಥಕವೆಂದು ಸಜ್ಜನರು ಹೇಳುತ್ತಾರೆ. ಕಾಗೆಯಾದರೋ ಬಹಳ ವರ್ಷ ಬದುಕಿ ಹೆಕ್ಕಿ ತಿನ್ನುತ್ತದೆ. ಕೀರ್ತಿ, ಧರ್ಮವಿದ್ದು ಬದುಕಿದರೆ ಬದುಕಿದ್ದು ಸಾರ್ಥಕ. ಬೇಡಿ ತಿಂದುಕೊಂಡು ಬಹಳ ವರ್ಷ ಬದುಕಿದರೆ ಕಾಗೆಗೆ ಸಮವಲ್ಲದೆ ಏನೂ ಪ್ರಯೋಜನವಿಲ್ಲ. ಲೋಕದಲ್ಲಿ ಬಹಳ ಮಂದಿ ಲೋಭಿಗಳು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವವರಾಗಿದ್ದಾರೆ. ಅದು ಒಳಿತಾಗುವಂತಹುದಲ್ಲ. ಪರೋಪಕಾರಕ್ಕೆಂದು ಸಹಾಯ ಮಾಡಿದವನು ಸಜ್ಜನರಲ್ಲಿ ಶ್ರೇಷ್ಠನಾಗುತ್ತಾನೆ. ಲೋಕೋಪಕಾರಕ್ಕಾಗಿ ಮೇಘಗಳು ನೀರು ತಂದು ಭೂಮಿಯ ಸಂತಾಪವನ್ನು ಪರಿಹರಿಸುತ್ತವೆ.'

ಆದ್ದರಿಂದ, 'ಈ ಫಲವನ್ನು ಅರಸನಿಗೆ ಕೊಟ್ಟರೆ ಆ ಅರಸು ಹುಟ್ಟು ಸಾವುಗಳಿಲ್ಲದೆ ಎಲ್ಲರಿಗೂ ಉಪಕಾರ ಮಾಡುವವನಾಗುತ್ತಾನೆ' ಎಂದು ಯೋಚಿಸಿ ಆಶೀರ್ವಾದಪೂರ್ವಕವಾಗಿ ಅರಸನಿಗೆ ಆ ಫಲವನ್ನು ನೀಡಿ "ಓ ಅರಸನೇ, ದೇವರ ವರ ಪ್ರಸಾದದಿಂದಾಗಿ ಪಡೆದುಕೊಂಡ ಈ ಅಪರೂಪದ ಫಲವನ್ನು ನೀನು ಸೇವಿಸು, ಹುಟ್ಟು ಸಾವುಗಳಿಲ್ಲದವನಾಗುತ್ತಿ" ಎಂದು ನುಡಿದ.

ಆಗ ಅರಸನು ಫಲವನ್ನು ತೆಗೆದುಕೊಂಡು ಆ ಬ್ರಾಹ್ಮಣನಿಗಾಗಿ ಅನೇಕ ಅಗ್ರಹಾರಗಳನ್ನು ಉಂಬಳಿ ಬಿಟ್ಟು ಕಳುಹಿಸಿದ. ನಂತರ 'ಒಂದು ಆಶ್ಚರ್ಯವೇನೆಂದರೆ

ನಾನು ಈ ಫಲವನ್ನು ತಿಂದುದರಿಂದಾಗಿ ದೇವತ್ವ ಬರುತ್ತದೆ. ನನಗೆ ಅನಂಗಸೇನೆಯೆಂಬ ಮಡದಿಯೊಂದಿಗೆ ಬಹಳ ಪ್ರೀತಿ. ನಾನು ಬದುಕಿರುವಾಗಲೇ ಆಕೆ ಸಾಯುತ್ತಾಳೆ. ಆಕೆ ಸಾಯುವ ದುಖವನ್ನು ನನ್ನಿಂದ ನೋಡಲಾಗದು. ಆದ್ದರಿಂದ ಈ ಫಲವನ್ನು ನನಗೆ ಪ್ರೀತಿಯವಳಾದ ಅನಂಗಸೇನೆಗೇ ನೀಡುತ್ತೇನೆ' ಎಂದು ಯೋಚಿಸಿ ಅನಂಗಸೇನೆಯನ್ನು ಕರೆಸಿ ಅವಳಿಗೆ ಆ ಫಲವನ್ನು ನೀಡಿದನು.

ಆ ಅನಂಗಸೇನೆಗೆ ಮಾಧುರಿಕನೆಂಬವನು ಪ್ರೀತಿಯವನು. ಅನಂಗಸೇನೆಯು ಮತ್ತೆ ಆಲೋಚಿಸಿ ಮಾಧುರಿಕನಿಗೆ ಆ ಫಲವನ್ನು ನೀಡಿದಳು. ಮಾಧುರಿಕನಿಗೆ ಒಬ್ಬಳು ಗೌಡಿ ಪ್ರೀತಿಯವಳಿದ್ದಳು, ಆತ ಅದನ್ನು ಆಕೆಗೆ ನೀಡಿದನು. ಆ ದಾಸಿಗೆ ಒಬ್ಬ ದನ ಮೇಯಿಸುವವನು ಪ್ರೀತಿಯವನಿದ್ದನು, ಆಕೆ ಆತನಿಗೆ ನೀಡಿದಳು. ಆತನಿಗೆ ಒಬ್ಬಾಕೆ ಸಗಣಿ ಬಾಚುವವಳೊಂದಿಗೆ ಪ್ರೀತಿ! ಆತ ಆಕೆಗೆ ನೀಡಿದ. ಆಕೆ ಗ್ರಾಮದ ಹೊರಗೆ ಸೆಗಣಿ ಬುಟ್ಟಿಯಲ್ಲಿ ತುಂಬಿಸಿಕೊಂಡು ಅದನ್ನು ಹೊತ್ತುಕೊಂಡು ಅದರ ಮೇಲೆ ಆ ಫಲವನ್ನಿರಿಸಿಕೊಂಡು ಸಂಜೆಯ ಸಮಯ ರಾಜಮಾರ್ಗದಲ್ಲಿ ಬರುತ್ತಿದ್ದಳು. ಆಗ ತನ್ನ ಮಕ್ಕಳೊಂದಿಗೆ ಸಂತೋಷದಿಂದಿದ್ದ ಭರ್ತೃಹರೀ ರಾಜನು ಆಕೆಯ ತಲೆಯ ಮೇಲೆ ಸೆಗಣಿಯ ಮೇಲಿದ್ದ ಆ ಹಣ್ಣನ್ನು ಕಂಡು ಅದನ್ನು ತೆಗೆದುಕೊಂಡು ಯೋಚನೆ ಮಾಡುತ್ತಾ ಮನೆಗೆ ಬಂದನು.

ಆ ಬ್ರಾಹ್ಮಣನನ್ನು ಕರೆಸಿ "ನೀನು ನನಗೊಂದು ಫಲ ನೀಡಿದ್ದೆಯಲ್ಲ, ಅದಕ್ಕೆ ಸಮಾನವಾದುದು ಬೇರೊಂದು ಫಲ ಇದೆಯೋ ಹೇಗೆ?" ಎಂದಾಗ ಬ್ರಾಹ್ಮಣ "ಓ ಅರಸನೇ, ಆ ಫಲ ದೇವರ ಪ್ರಸಾದದಿಂದಾಗಿ ಲಭಿಸಿದ್ದು, ಅದಕ್ಕೆ ಸಮಾನವಾದ ಬೇರೆ ಫಲ ಇಲ್ಲ. ಅರಸು ಸಾಕ್ಷಾತ್ ದೇವರಂತೆ. ಅವರ ಎದುರಲ್ಲಿ ಸುಳ್ಳು ಹೇಳಬಾರದು. ಅವರನ್ನು ದೇವರಂತೆಯೇ ಕಾಣಬೇಕು. ಅರಸರನ್ನು, ಋಷಿಗಳನ್ನು ದೇವರ ಸ್ವರೂಪ ಎಂದು ಹೇಳಿದ್ದಾರೆ, ಬುದ್ಧಿವಂತ ಸುಳ್ಳು ಹೇಳಬಾರದು" ಎಂದು ಹೇಳಿದ. ಆಗ ಅರಸ "ಅದಕ್ಕೆ ಸಮಾನವಾದ ಫಲವನ್ನು ಒಬ್ಬಾಕೆ ತೋರಿಸಿದಳು. ಅದು ಹೇಗೆ?" ಎಂದಾಗ ಬ್ರಾಹ್ಮಣ "ಅರಸನೇ ಆ ಫಲ ನೀನು ಸೇವಿಸಿದೆಯಾ?" ಎಂದು ಕೇಳಿದ. ಅರಸ "ನಾನು ಸೇವಿಸಲಿಲ್ಲ, ನನಗೆ ಪ್ರೀತಿಯವಳಾದ ಅನಂಗಸೇನೆಗೆ ನೀಡಿದೆ" ಎಂದು ಹೇಳಿದ. "ಆ ಫಲವನ್ನು ಏನು ಮಾಡಿದೆ ಎಂದು ಆಕೆಯನ್ನು ಕೇಳು" ಎಂದಾಗ ಅರಸ ಆಕೆಯನ್ನು ಏನು ಮಾಡಿದೆಯೆಂದು ಕೋಪದಿಂದ ಕೇಳಿದ. ಆಕೆ ಮಾಧುರಿಕನೆನ್ನುವವನಿಗೆ ನೀಡಿದೆ ಎಂದು ಹೇಳಿದಳು. ಆತನನ್ನು ಕರೆಸಿ ಕೇಳುವಾಗ ದಾಸಿಗೆ ನೀಡಿದೆನೆಂದ. ದಾಸಿಯಲ್ಲಿ ಕೇಳಿದಾಗ ಆಕೆ ದನ ಮೇಯಿಸುವವನಿಗೆ ನೀಡಿದೆನೆಂದಳು. ಆತನ ಬಳಿ ಕೇಳಿದಾಗ ಸಗಣಿ ಹೊರುವವಳಿಗೆ ನೀಡಿದೆ ಎಂದನು.

ಆಗ ಅರಸ ಆ ಫಲವನ್ನು ಕೈಯಲ್ಲಿ ಹಿಡಿದುಕೊಂಡು ದು:ಖಿಸಿ 'ಪ್ರಾಯವೂ ರೂಪವೂ ಮನಸ್ಸನ್ನು ಅಪಹರಿಸುತ್ತದೆ. ದೇವರು ನಡೆಸಿದಂತಾಗುತ್ತದೆ. ಪುರುಷರಿಗೆ ಸ್ತ್ರೀಯರಲ್ಲಿ ಅಭಿಮಾನ ಎನ್ನುವಂತಹುದು ಆಶ್ಚರ್ಯ. ಸ್ತ್ರೀಯರ ಮನಸ್ಸನ್ನು

ಅಪಹರಿಸಲಾಗದು. ಮೇಘದ ಗರ್ಜನೆಯೂ, ಮಳೆ ಬೀಳುವುದೂ, ಮಳೆ ನಿಲ್ಲುವುದೂ, ಕುದುರೆಯ ಹೆಜ್ಜೆಯೂ, ಸ್ತ್ರೀಯರ ಮನಸ್ಸೂ, ಪುರುಷರ ಐಶ್ವರ್ಯವೂ ದೇವರಿಗೇ ತಿಳಿಯದು, ಇನ್ನು ಮನುಷ್ಯರಿಗೆ ಹೇಗೆ ತಿಳಿದೀತು? ಕಾಡಿನಲ್ಲಿ ಹುಲಿಯನ್ನು ಹಿಡಿಯುತ್ತಾರೆ. ಆಕಾಶದಲ್ಲಿರುವ ಹಕ್ಕಿಗಳನ್ನೂ, ನೀರಿನಲ್ಲಿರುವ ಮೀನನ್ನೂ ಹಿಡಿಯುತ್ತಾರೆ. ಸ್ತ್ರೀಯರ ಮನಸ್ಸು ಚಂಚಲವಾದುದರಿಂದ ಹಿಡಿಯಲಾಗದು. ಬಂಜೆಗೆ ಮಗ ಹುಟ್ಟಿ ಆತನಿಗೆ ರಾಜ್ಯ ದೊರೆತರೂ, ಆಕಾಶದ ಪುಷ್ಪವನ್ನು ಸ್ತ್ರೀಗೆ ನೀಡಿದರೂ ಎಂದಿಗೂ ಸ್ತ್ರೀಯ ಮನಸ್ಸು ಶುದ್ಧವಾಗದು. ಸುಖ ದು:ಖ, ಜಯ ಪರಾಜಯ, ಸಾವು ಬದುಕನ್ನು ಯಾರು ತಿಳಿಯುವರು ಅವರೂ ಸುಲಭದಲ್ಲಿ ಸ್ತ್ರೀಯರ ವಿಲಾಸದಿಂದಾಗಿ ಮೋಹಿಸುತ್ತಾರೆ ಅಲ್ಲದೆ ಕಾಮಬಾಧೆಯಿಂದಾಗಿ ಒಬ್ಬರ ಸಂಗವನ್ನು ಮಾಡಿ ಮತ್ತೊಬ್ಬರನ್ನು ಇಚ್ಛಿಸುತ್ತಾರೆ. ಎಲ್ಲಾ ಸ್ತ್ರೀಯರೂ ಹೀಗೆಯೇ, ಅವರ ಮನೋಭಿಲಾಷೆ ಈಡೇರಿತು ಎನ್ನುವಂತಾದ್ದು ಇಲ್ಲ. ಮಂತ್ರವಿಲ್ಲದೆಯೂ, ತಂತ್ರವಿಲ್ಲದೆಯೂ, ಸ್ನೇಹವಿಲ್ಲದೆಯೂ, ಮನಸ್ಸಿನಲ್ಲಿ ಆಶೆಯಿಲ್ಲದೆಯೂ ಸ್ತ್ರೀಯರು ಪುರುಷರನ್ನು ಮರುಳು ಮಾಡುತ್ತಾರೆ. ಸ್ತ್ರೀಯರ ಪ್ರಾಯವೆನ್ನುವುದು ಕುಲವನ್ನೂ, ಜಾತಿಯನ್ನೂ ಕೆಡಿಸುವಂತಹುದು. ಅದು ಅಧಮವಾದುದು. ಸ್ತ್ರೀಯರು ಧನಕ್ಕಾಗಿ ಇಂತಹಾ ವ್ಯವಹಾರ ಮಾಡಿ ಕ್ರೀಡಿಸುತ್ತಾರೆ. ಆದ್ದರಿಂದ ಉತ್ತಮ ಕುಲಶೀಲವಿದ್ದ ಮನುಷ್ಯನಿಗೆ ಸ್ತ್ರೀಯು ಸುಡುಗಾಡಿನಲ್ಲಿರುವ ಅಶ್ವತ್ಥದ ಮರದಂತೆ ಬಿಟ್ಟುಬಿಡಲು ಸೂಕ್ತವಾದುದು. ವೈರಾಗ್ಯಕ್ಕೆ ಸಮಾನವಾದ ಭಾಗ್ಯವಿಲ್ಲ, ಭೋಗಕ್ಕೆ ಸಮಾನವಾದ ಸುಖವಿಲ್ಲ, ರಕ್ಷಣೆ ಮಾಡುವಲ್ಲಿ ದೇವರಿಗೆ ಸಮಾನವಾದವರು ಬೇರೊಬ್ಬರಿಲ್ಲ, ಸಂಸಾರಕ್ಕೆ ಸಮಾನವಾದ ಶತ್ರುಗಳಿಲ್ಲ' ಎಂದು ಈ ಪ್ರಕಾರವಾಗಿ ತತ್ವವನ್ನು ಹೇಳಿ ಬಹು ವೈರಾಗ್ಯ ಹೊಂದಿ ವಿಕ್ರಮಾದಿತ್ಯನಿಗೆ ರಾಜ್ಯಾಧಿಪತ್ಯವನ್ನು ನೀಡಿ ಪಟ್ಟಾಭಿಷೇಕವನ್ನು ಮಾಡಿ ತಾನು ತಪಸ್ಸಿಗಾಗಿ ವನಕ್ಕೆ ತೆರಳಿದನು. ಹೀಗೆ ಭರ್ತೃಹರಿಗೆ ವೈರಾಗ್ಯ ಬಂದ ಕಥೆ ಸಮಾಪ್ತಿಯಾಯಿತು ಎಂದು ಪಾರ್ವತಿ ದೇವಿಗೆ ಪರಮೇಶ್ವರ ಹೇಳಿದ ಕಥೆಯನ್ನು ಜನರು ತಿಳಿಯಲೆಂದು ಬರೆಯಲಾಯಿತು.

ಆ ವಿಕ್ರಮಾದಿತ್ಯರಾಯ ತನಗೆ ಪಟ್ಟವಾದ ಬಳಿಕ ಬ್ರಾಹ್ಮಣರ, ಬಡತನದಿಂದ ದು:ಖಿಸುತ್ತಿದ್ದ ಕುಟುಂಬಗಳ ಮನಸ್ಸಿನಲ್ಲಿದ್ದ ಇಚ್ಛೆಗಳನ್ನು ಪೂರ್ಣ ಮಾಡಿದ. ಆ ಬಳಿಕ ಒಂದಾನೊಂದು ದಿನ ಹಾವುಗಳನ್ನು ಮೈಮೇಲೆ ಹಾಕಿಕೊಂಡ ದಿಗಂಬರ ಎಂಬ ರುದ್ರದೇವ ಅರಸನ ಬಳಿ ಬಂದು ಸಂತೋಷದಿಂದ ಆಶೀರ್ವದಿಸಿ ಆತ ಕೃಷ್ಣ ಚತುರ್ದಶಿಯಂದು ಸ್ಮಶಾನದಲ್ಲಿ ನಿಂತು ಘೋರ ಮಂತ್ರದಿಂದ ನಡೆಸುವ ಸಾಧನೆಯ ಬಗ್ಗೆ ಅರಸನಿಗೆ ತಿಳಿಸಿದ. ಮುಂದೆ ಅರಸನಿಗೆ ಬೇತಾಳನೆನ್ನುವ ಬ್ರಹ್ಮರಾಕ್ಷಸನ ಸಿದ್ಧಿಯಾಯಿತು. ಅರಸ ಬಹಳ ಸಿದ್ಧಿ ಸಂಪಾದನೆ ಮಾಡಿದ. ಭೂಮಿಯಲ್ಲಿ ವಿಕ್ರಮಾದಿತ್ಯನಿಗೆ ಸಮಾನವಾಗಿ ಯಾರೂ ರಾಜ್ಯಾಭಾರ ಮಾಡಿದವರಿಲ್ಲ, ಮೂರು ರಾಜ್ಯದಲ್ಲಿ ಆತನ ಕೀರ್ತಿಯು ಭಾಗೀರಥಿ ನದಿಯ ಹಾಗೆ ಹರಿಯಿತು.

ಆ ಸಮಯದಲ್ಲಿ ದೇವಲೋಕದಲ್ಲಿ ದೇವೇಂದ್ರನು ವಿಶ್ವಾಮಿತ್ರನ ತಪಸ್ಸು ಕೆಡಿಸಲೆಂದು ರಂಭೆಯನ್ನೂ ಊರ್ವಶಿಯನ್ನೂ ಕರೆಸಿ ಮಾತನಾಡಿದನು. ಅವರಿಬ್ಬರೊಳಗೆ ನೃತ್ಯದಲ್ಲೂ, ಹಾಡಿನಲ್ಲೂ ಬಹಳ ಘಟ್ಟಿಗರಾದವರು ವಿಶ್ವಾಮಿತ್ರನ ತಪಸ್ಸು ಕೆಡಿಸಲು ತಪೋವನಕ್ಕೆ ಹೋಗಬೇಕು, ವಿಶ್ವಾಮಿತ್ರನ ತಪಸ್ಸು ಕೆಡಿಸುವಾಕೆಗೆ ಸಂತೃಪ್ತಿಯಾಗುವಂತೆ ಉಡುಗೊರೆ ನೀಡುತ್ತೇನೆಂದು ದೇವೇಂದ್ರ ಘೋಷಿಸಿದನು. ರಂಭೆ ಊರ್ವಶಿಯರ ನಡುವೆ ನೃತ್ಯದ ವಿಷಯದಲ್ಲಿ ವ್ಯಾಜ್ಯವಾಯಿತು. ಅದರ ನಿರ್ಣಯಕ್ಕಾಗಿ ಅವರಿಬ್ಬರಿಂದ ನೃತ್ಯವನ್ನು ಮಾಡಿಸಿ ಪರೀಕ್ಷಿಸಬೇಕೆಂದು ದೇವತೆಗಳ ಸಭೆಯು ತೀರ್ಮಾನಿಸಿತು.

ಆಗ ಮೊದಲಿಗೆ ರಂಭೆಯ ನೃತ್ಯವಾಯಿತು. ಎರಡನೇ ದಿನ ಊರ್ವಶಿಯ ನೃತ್ಯವಾಯಿತು. ದೇವ ಸಮೂಹವೆಲ್ಲವೂ ಇಬ್ಬರ ನೃತ್ಯವನ್ನೂ ನೋಡಿ ಸಂತೋಷಪಟ್ಟರಾದರೂ ಇಂತವಳ ನೃತ್ಯವೇ ಶ್ರೇಷ್ಠವೆಂದು ನಿರ್ಣಯಕ್ಕೆ ಬರಲಾರದೇ ಹೋದರು. ಆಗ ನಾರದರು "ಓ ದೇವತೆಗಳಿಗೆ ಅರಸನಾಗಿರುವ ಇಂದ್ರ ದೇವರೇ, ಭೂಲೋಕದಲ್ಲಿ ವಿಕ್ರಮಾದಿತ್ಯ ಎನ್ನುವ ಅರಸನಿದ್ದಾನೆ. ಸಕಲ ವಿದ್ಯೆಯನ್ನೂ ಚೆನ್ನಾಗಿ ಬಲ್ಲವ. ವಿಶೇಷವಾಗಿ ನೃತ್ಯ ಹಾಡಿನಲ್ಲೂ ಗಟ್ಟಿಗನಾದವನು. ಆತ ಇವರ ವ್ಯಾಜ್ಯವನ್ನು ನಿರ್ಣಯ ಮಾಡುತ್ತಾನೆ" ಎಂದು ಹೇಳಿದಾಗ ದೇವೇಂದ್ರನು ವಿಕ್ರಮಾದಿತ್ಯನನ್ನು ಕರೆತರಲೆಂದು ಮಾತಲಿಯನ್ನು ಕಳಿಸಿದನು.

ಆಗ ವಿಕ್ರಮಾದಿತ್ಯನು ಆ ಇಂದ್ರ ದೇವರಿಂದ ಆಹ್ವಾನಿತನಾಗಿ, ಮಂತ್ರಿ, ಬೇತಾಳನಿಂದಾಗಿ ಅಮರಾವತಿಗೆ ಬಂದು ದೇವೇಂದ್ರನಿಗೆ ನಮಸ್ಕರಿಸಿ ದೇವೇಂದ್ರನೂ ಆತನಿಂದ ಗೌರವವನ್ನು ಸ್ವೀಕರಿಸಿ ಸಭೆಯಲ್ಲಿ ಕುಳಿತುಕೊಂಡಿದ್ದಾಗ ಎರಡನೇ ನೃತ್ಯದ ಸಭೆ ಪ್ರಾರಂಭವಾಯಿತು. ಅದರಲ್ಲಿ ಮೊದಲಿಗೆ ರಂಭೆಯು ಶಾಸ್ತ್ರದಲ್ಲಿ ಹೇಳಿದಂತೆಯೇ ನರ್ತಿಸಿದಳು. ನಂತರ ಊರ್ವಶಿಯು ನೃತ್ಯ ಮಾಡಿದಳು. ಆಗ ವಿಕ್ರಮಾದಿತ್ಯ ಊರ್ವಶಿಯನ್ನು ಹೊಗಳಿದ, ಜಯವನ್ನೂ ನೀಡಿದ. ಇಂದ್ರ ದೇವ "ಆಕೆಗೆ ಹೇಗೆ ಜಯ ನೀಡಿದೆ" ಎಂದು ಕೇಳಿದ. ವಿಕ್ರಮಾದಿತ್ಯ "ಓ ದೇವರೇ, ನೃತ್ಯದಲ್ಲಿ ಅಂಗಸೌಷ್ಠವವೆನ್ನುವುದು ಮುಖ್ಯವೆಂದು ಹೇಳಿದೆ. ನೃತ್ಯಶಾಸ್ತ್ರದಲ್ಲಿ ಅದು ವಿವರವಾಗಿದೆ. ಅದರ ಅರ್ಥವನ್ನೆಲ್ಲಾ ತಿಳಿಯಬೇಕೆಂದರೆ ನಾಟ್ಯಶಾಸ್ತ್ರ ಭರತಶಾಸ್ತ್ರ ಅರಿತವನಿಗೆ ಮಾತ್ರ ಸಾಧ್ಯ. ನಿಮಗೆ ಹೇಳಿದರೆ ತಿಳಿಯದು. ಹೀಗಾಗಿ ನೃತ್ಯಶಾಸ್ತ್ರದಲ್ಲಿ ಹೇಳಿದ ನೃತ್ಯ ಮಾಡಿದ ಊರ್ವಶಿಯನ್ನು ಘಟ್ಟಿಗಿತ್ತಿಯೆಂದು ಹೇಳಿದೆ" ಎಂದನು.

ಆಗ ಇಂದ್ರದೇವ ಸಂತೋಷಪಟ್ಟು ವಿಕ್ರಮಾದಿತ್ಯರಾಜನನ್ನು ವಸ್ತ್ರ ಮೊದಲಾದವುಗಳಿಂದ ಸತ್ಕರಿಸಿ ಬಹಳ ಅಪೂರ್ವವಾದ ಬೆಲೆಕಟ್ಟಲಾಗದ ನವರತ್ನಗಳಿಂದೊಡಗೂಡಿದ ಸಿಂಹಾಸನವನ್ನು ನೀಡಿದನು. ಆ ಸಿಂಹಾಸನದಲ್ಲಿ ಕೂರಿಸಿದ ಮೂವತ್ತೆರಡು ಬೊಂಬೆಗಳಿವೆ. ಆ ಬೊಂಬೆಗಳ ತಲೆಯಲ್ಲಿ ಕಾಲಿರಿಸಿ ಆ ಸಿಂಹಾಸನವನ್ನೇರಿ ಕುಳಿತುಕೊಳ್ಳಲು ತಕ್ಕುದಾಗಿರುವ ಅಂದವಾದ ಸಿಂಹಾಸನವನ್ನು

ಇಂದ್ರ ದೇವರ ಅಪ್ಪಣೆಯಿಂದಾಗಿ ವಿಕ್ರಮಾರ್ಕ ರಾಜನು ಪಡೆದುಕೊಂಡು ತನ್ನ ಅರಮನೆಗೆ ಬಂದನು. ಈ ಪ್ರಕಾರ ಸಿಂಹಾಸನ ಪ್ರಾಪ್ತಿ ಆಯಿತು. ತದನಂತರ ಅರಸನೂ ಸುಮುಹೂರ್ತದಲ್ಲಿಯೂ, ಉತ್ತಮ ಲಗ್ನದಲ್ಲಿಯೂ ಆ ಸಿಂಹಾಸನವನ್ನೇರಿ ರಾಜ್ಯಭಾರ ಮಾಡಿದನು.

ನಂತರ ಬಹಳ ವರ್ಷಗಳಾಗುತ್ತಿದ್ದಂತೆ ಪ್ರತಿಷ್ಠಾ ಎಂಬ ಪಟ್ಟಣದಲ್ಲಿ ಕನ್ಯೆಯೊರ್ವಳಲ್ಲಿ ನಾಗೇಂದ್ರನೆನ್ನುವ ಶೇಷನಿಂದಾಗಿ ಶಾಲಿವಾಹನನು ಜನಿಸಿದನು. ಉಜ್ಜಯಿನಿ ನಗರದಲ್ಲಿ ಅರಸನ ಕಡೆಯವರು ಭೂಕಂಪ, ಧೂಮಕೇತು ಮುಂತಾದ ಉತ್ಪಾತಗಳನ್ನು ಕಂಡರು. ವಿಕ್ರಮಾರ್ಕನೂ ಅರಿತವರನ್ನು ಕರೆಸಿ "ಓ ಜ್ಞಾನಿಗಳೇ, ಇದೇನು ಉತ್ಪಾತಗಳು ದಿನವೂ ಆಗುತ್ತಿವೆ? ಇದರಿಂದಾಗಿ ಯಾರಿಗೆ ಫಲ, ಯಾರಿಗೆ ಅನಿಷ್ಟವೆಂದು ಹೇಳಿ" ಎಂದು ಕೇಳಿದ. "ಅರಸರೇ, ಭೂಕಂಪ ಸಂಧ್ಯಾಕಾಲದಲ್ಲಾದರೆ ಅದರಿಂದ ಅರಸರಿಗೆ ಕಡುಕಷ್ಟವೆನ್ನುವ ಸೂಚನೆ ನೀಡುತ್ತದೆಯೆಂದು ನಾರದೀಯದಲ್ಲಿ ಹೇಳಿದೆ. ಸಂಧ್ಯಾಕಾಲ, ಮುಂಜಾನೆ ಈ ಎರಡೂ ಸಮಯದಲ್ಲಿ ಭೂಕಂಪವಾದರೂ ಅರಸರಿಗೆ ಅನಿಷ್ಟ. ಧೂಮಕೇತುವೂ ಅರಸರಿಗೆ ವಿನಾಶವೆಂದು ಹೇಳುತ್ತದೆ" ಎಂಬಿತ್ಯಾದಿಯಾಗಿ ಜ್ಞಾನಿಗಳು ಹೇಳಿದರು. ಅದನ್ನು ಕೇಳಿ ಅರಸನು "ಹಿಂದೆ ಪರಮೇಶ್ವರನು ತಪಸ್ಸಿನಿಂದಾಗಿ ಸಂತೋಷಪಟ್ಟು 'ಓ ಅರಸನೇ ನಿನಗೆ ಪ್ರಸನ್ನನಾದೆ, ಆದರೆ ನೀನು ಪರ್ಯಾಯವೆಲ್ಲಾ ರಾಜ್ಯಭಾರ ಮಾಡಬೇಕೆಂದು ಕೇಳಿಕೊಳ್ಳಬೇಡ' ಎಂದು ಹೇಳಿದ್ದ. ಆಗ ನಾನು 'ಓ ದೇವರೇ, ಕೀರ್ತಿವಂತಳಾದ ಆರು ತಿಂಗಳ ಕನ್ಯೆಯ ಹೊಟ್ಟೆಯಲ್ಲಿ ಹುಟ್ಟುವ ಆಕೆಯ ಮಗನಿಂದಾಗಿ ನನಗೆ ಮರಣವಾಗಲಿ' ಎಂದು ಕೇಳಿಕೊಂಡಿದ್ದೆ. ಈಶ್ವರನೂ 'ಹಾಗೆಯೇ ಆಗಲಿ' ಎಂದು ಹೇಳಿದ್ದ. ಹಾಗಾದರೆ ಅಂತವನು ಎಲ್ಲಿ ಹುಟ್ಟಿದ್ದಾನೆ?" ಎಂದನು. ಜ್ಞಾನಿಗಳು "ದೇವರ ಸೃಷ್ಟಿಯೂ ಯೋಚನೆ ಮಾಡಲೂ ಅಸಾಧ್ಯವಾದಂತಹುದು, ಅಂತವನು ಎಲ್ಲಿಯಾದರೂ ಒಂದು ಪ್ರದೇಶದಲ್ಲಿ ಹುಟ್ಟಿರಬಹುದೆಂದು ತೋರುತ್ತದೆ" ಎಂದು ಹೇಳಿದರು.

ಆಗ ಅರಸನು ಬೇತಾಳನನ್ನು ಕರೆಸಿ ಆ ವಿಚಾರವನ್ನೆಲ್ಲಾ ಆತನ ಬಳಿ ಹೇಳಿ "ಓ ಬೇತಾಳ ನೀನು ಭೂಮಿಯೆನ್ನೆಲ್ಲಾ ತಿರುಗಿ, ಈ ಪ್ರಕಾರದಲ್ಲಿ ಹುಟ್ಟಿದವನು ಯಾವ ದೇಶದಲ್ಲಿ, ಯಾವ ನಗರದಲ್ಲಿ ಹುಟ್ಟಿದ್ದಾನೆಂದು ನಿರ್ಣಯ ಮಾಡಿಕೊಂಡು ಬೇಗ ಬಾ" ಎಂದು ಹೇಳಿದ. ಆಗ ಬೇತಾಳನೂ 'ಮಹಾಪ್ರಸಾದ'ವೆಂದು ಅಪ್ಪಣೆ ಪಡೆದುಕೊಂಡು ಕುಶದ್ವೀಪವನ್ನೂ ಹುಡುಕಿ, ಜಂಬುದ್ವೀಪಕ್ಕೂ ಬಂದು ಪ್ರತಿಷ್ಠಾ ನಗರಕ್ಕೆ ಬಂದು, ಓರ್ವ ಕುಂಬಾರನ ಮನೆಯಲ್ಲಿ ಒಂದು ಮಗುವನ್ನು ಕಾಂಚನಮಾಲ ಎಂಬಾಕೆಯು ಮುದ್ದು ಮಾಡುತ್ತಿರುವುದನ್ನು ಕಂಡು ಆಶ್ಚರ್ಯದಿಂದ ಕೇಳಿದಾಗ ಆಕೆ "ಈತ ನನ್ನ ಮಗ" ಎಂದು ಹೇಳಿದಳು. ಬೇತಾಳ ಆಕೆಯೊಂದಿಗೆ "ನಿನ್ನ ಅಪ್ಪ ಯಾರು?" ಎಂದು ಕೇಳಿದ. ಆಕೆ ಒಬ್ಬ ಬ್ರಾಹ್ಮಣನನ್ನು ತೋರಿಸಿದಳು. ಆ ಬ್ರಾಹ್ಮಣನ ಬಳಿ ಕೇಳಿದಾಗ ಆತನು "ಆಕೆ ನನ್ನ ಮಗಳು, ಆಕೆಯ ಮಗ ಆತ" ಎಂದು ಹೇಳಿದ.

ಅದನ್ನು ಕೇಳಿ ಆಶ್ಚರ್ಯಪಟ್ಟು ಬೇತಾಳ 'ಓ ಬ್ರಾಹ್ಮಣಾ, ಇದೇನು' ಎಂದು ಬ್ರಾಹ್ಮಣನ ಬಳಿ ಮತ್ತೂ ಮಾತನಾಡಿದ. ಆ ಬ್ರಾಹ್ಮಣ "ದೇವತೆಗಳ ಚರಿತೆಯೂ ತಿಳಿಯದಂತಹುದು. ಆಕೆಯೊಂದಿಗೆ ನಾಗೇಂದ್ರನಾದ ಶೇಷನು ಸಂಭೋಗ ಮಾಡಿದನು. ಆತನಿಂದಾಗಿ ಆಕೆಯಲ್ಲಿ ಹುಟ್ಟಿದವನು ಈ ಮಗ, ಶಾಲ್ಯವಾಹನ ಎಂಬವನು" ಎಂದು ವಿವರಿಸಿದ.

ಅದನ್ನು ಕೇಳಿದ ಕೂಡಲೇ ಬೇತಾಳನು ತ್ವರಿತವಾಗಿ ಉಜ್ಜಯಿನಿ ಪಟ್ಟಣಕ್ಕೆ ಬಂದು ಅರಸನಾದ ವಿಕ್ರಮಾದಿತ್ಯನಿಗೋಸ್ಕರ ಆ ಎಲ್ಲಾ ವೃತ್ತಾಂತವನ್ನೂ ಹೇಳಿದನು. ಅರಸ ಆತನಿಗೆ ಬೇಕಾದುದನ್ನು ನೀಡಿ ತನ್ನ ಖಡ್ಗವನ್ನು ತೆಗೆದುಕೊಂಡು ಪ್ರತಿಷ್ಠಾ ನಗರಕ್ಕೆ ಬಂದು ಆ ಶಾಲ್ಯವಾಹನನ್ನು ಕೊಲ್ಲಲು ಸಿದ್ಧನಾದ. ಆಗ ಆ ಖಡ್ಗದಿಂದಾಗಿಯೇ ಬಿದ್ದುಬಿಟ್ಟ. ಆತನನ್ನು ಪ್ರತಿಷ್ಠಾ ನಗರದಿಂದ ಉಜ್ಜಯಿನಿ ನಗರಕ್ಕೆ ಕರೆದುಕೊಂಡು ಬಂದರು. ಕ್ಷಣ ಹೊತ್ತಿಗೆ ಆ ವೇದನೆಯನ್ನು ತಡೆಯಲಾಗದೆ ಶರೀರವನ್ನು ತೊರೆದನು. ಆ ಅರಸನ ಹೆಂಡಂದಿರೆಲ್ಲರೂ ಬೆಂಕಿಗೆ ಬೀಳಲಾರಂಭಿಸಿದರು. ಆಗ ಮಂತ್ರಿಗಳೂ 'ಈ ಅರಸ ಮಕ್ಕಳಿಲ್ಲದವನು. ಮುಂದೇನು ಮಾಡಬೇಕೆಂದು ಭಟ್ಟಿಯೊಡನೆ ಕೇಳಿ' ಎಂದು ವಿಚಾರ ಮಾಡಿದರು. 'ಆ ಸ್ತ್ರೀಯರ ನಡುವೆ ಯಾರಾದರೂ ಒಬ್ಬಾಕೆ ಗರ್ಭವತಿಯಾಗಿದ್ದರೆ ಆದೀತು' ಎಂದು ವಿಚಾರಿಸಿದಾಗ ಏಳು ತಿಂಗಳ ಗರ್ಭವತಿಯಾದ ಮಡದಿಯೊಬ್ಬಳಿದ್ದಳು. ಆಗ ಮಂತ್ರಿಗಳೆಲ್ಲಾ ಸೇರಿ ಆ ಗರ್ಭಕ್ಕೆ ಪಟ್ಟಾಭಿಷೇಕ ಮಾಡಿದರು. ಮಂತ್ರಿಗಳು ಮಗು ಜನಿಸಿ ಪ್ರಾಪ್ತವಯಸ್ಕನಾಗುವವರೆಗೆ ರಾಜ್ಯ ಪರಿಪಾಲನೆ ಮಾಡಲು ಪ್ರಾರಂಭಿಸಿದರು. ಹೀಗೆ ವಿಕ್ರಮಾದಿತ್ಯರಾಯನು ಸ್ವರ್ಗಕ್ಕೆ ಹೋದನು.

ಆಗ ಆಕಾಶದಿಂದ "ಓ ಮಂತ್ರಿಗಳೇ, ಸಿಂಹಾಸನವನ್ನೇರಲು ಯೋಗ್ಯನಾದವನು, ಈಗಿನ ಅರಸನಿಗೆ ಸಮನಾದವನು ಇಲ್ಲ. ಹಾಗಾಗಿ ಅವನ ನಂತರ ಈ ಸಿಂಹಾಸನವನ್ನು ಉತ್ತಮ ಕ್ಷೇತ್ರದಲ್ಲಿ ಇರಿಸಬೇಕು" ಎಂಬ ಒಂದು ಗಂಭೀರವಾದ ಅಶರೀರವಾಣಿಯಾಯಿತು. ಅದನ್ನು ಕೇಳಿ ಮಂತ್ರಿಗಳೂ ಬಹಳ ಉತ್ತಮವಾದ ಕ್ಷೇತ್ರದಲ್ಲಿ ಆ ಸಿಂಹಾಸನವನ್ನು ಸ್ಥಾಪನೆ ಮಾಡಿದರು. ಹಾಗೆ ಸ್ಥಾಪಿಸಿದ ನಂತರ ಬಹಳ ವರ್ಷ ಕಳೆಯಿತು.

ಆ ಕಾಲದಲ್ಲಿ ಆತನ ಬಳಿಕ ಭೋಜನೆನ್ನುವ ಅರಸ ಆ ರಾಜ್ಯದ ಅಧಿಕಾರವನ್ನು ಪಡೆದನು. ಭೋಜನೆನ್ನುವ ಆ ಅರಸ ರಾಜ್ಯಭಾರ ಮಾಡುತ್ತಿರುವಾಗ ಒಂದಾನೊಂದು ದಿನ ಒಬ್ಬ ಬ್ರಾಹ್ಮಣ ಹಿಂದೆ ಆ ಸಿಂಹಾಸನ ಸ್ಥಾಪನೆ ಮಾಡಲಾಗಿದ್ದ ಕ್ಷೇತ್ರವನ್ನು ಅಗೆಸಿ ಉತ್ತಮಗೊಳಿಸಿದ. ಆ ಕ್ಷೇತ್ರವೂ ಬಹಳ ಫಲವತ್ತಾಯಿತು. ಆಗ ಬ್ರಾಹ್ಮಣ ಎಲ್ಲಿ ಆ ಸಿಂಹಾಸನವನ್ನು ಇಡಲಾಗಿತ್ತೋ ಆ ಸ್ಥಳವನ್ನು ಉಚ್ಚಸ್ಥಾನವನ್ನಾಗಿ ಮಾಡಿಕೊಂಡು ಪಕ್ಷಿಗಳನ್ನು ಓಡಿಸಲಿಕ್ಕಾಗಿ ಅದರ ಮೇಲೆ ಮಂಚವನ್ನು ಮಾಡಿ ಕುಳಿತು ಪಕ್ಷಿಗಳನ್ನು ಓಡಿಸುತ್ತಾ ಇದ್ದನು.

ಆಗ ಒಂದು ದಿನ ಭೋಜರಾಜನು ಎಲ್ಲಾ ಅರಸು ಮಕ್ಕಳೊಂದಿಗೊಡಗೂಡಿ ಬೇಟೆಗಾಗಿ ಆ ಕ್ಷೇತ್ರದ ಬಳಿಗೆ ಹೋದನು. ಆಗ ಮಂಚದ ಮೇಲೆ ಇದ್ದ ಬ್ರಾಹ್ಮಣ "ಓ

ಅರಸನೇ, ಈ ಕ್ಷೇತ್ರವು ಉತ್ತಮ ಫಲವಿರುವುದಾಗಿದೆ, ಸೈನ್ಯದೊಡಗೂಡಿ ಬಂದು ಇಚ್ಛಾನುಸಾರ ತಿನ್ನಿ, ಕುದುರೆಗಳಿಗೆ ಕಡಲೆಯನ್ನೂ ನೀಡಿರಿ. ನನ್ನ ಜನ್ಮ ಸಾರ್ಥಕವಾಗುತ್ತದೆ" ಎಂದಿತ್ಯಾದಿಯಾಗಿ ಉಪಚರಿಸಿದನು. ಅದನ್ನು ಕೇಳಿ ಅರಸನು ತನ್ನ ಜನರೊಂದಿಗೊಡಗೂಡಿ ಪ್ರವೇಶಿಸಿದನು.

ಅವರ ಉಪಚಾರಕ್ಕೆಂದು ಮಂಚದಿಂದ ಇಳಿದು ಬಂದ ಬ್ರಾಹ್ಮಣನು ಅವರನ್ನು ನೋಡಿ "ಓ ಅರಸನೇ, ಇದೇನು ಅನ್ಯಾಯ ಮಾಡುತ್ತಿದ್ದಿ? ಇದು ಬ್ರಾಹ್ಮಣ ಕ್ಷೇತ್ರ. ಇದನ್ನು ಹಾಳು ಮಾಡುತ್ತಿದ್ದಿ. ರಾಜ್ಯದಲ್ಲಿ ಅನ್ಯಾಯ ಮಾಡಿದರೆ ನಿನ್ನಲ್ಲಿ ಹೇಳಬೇಕೆಂದು ಹೇಳುತ್ತಾರೆ. ನೀನಾದರೋ ಅನ್ಯಾಯ ಮಾಡಲು ತೊಡಗಿದ್ದಿ. ಅದನ್ನೀಗ ಯಾರು ತಡೆಯುತ್ತಾರೆ? ನೀವೆಲ್ಲಾ ಧರ್ಮಶಾಸ್ತ್ರವನ್ನು ತಿಳಿದವರು, ಬ್ರಾಹ್ಮಣದ್ರವ್ಯವನ್ನು ಹೇಗೆ ಹಾಳು ಮಾಡುತ್ತೀರಿ? ಬ್ರಹ್ಮಸ್ವ ಎನ್ನುವುದೇ ವಿಷ, ವಿಷವೆನ್ನುವುದು ವಿಷವಲ್ಲ. ಬ್ರಹ್ಮಸ್ವ ಎನ್ನುವುದು ವಿಷವಲ್ಲದಿದ್ದರೂ ವಿಷವೆಂದು ಹೇಳುತ್ತಾರೆ. ವಿಷವಾದರೆ ಒಬ್ಬನನ್ನು ಕೊಲ್ಲುತ್ತದೆ, ಬ್ರಹ್ಮಸ್ವ ಮಕ್ಕಳನ್ನು ಮೊಮ್ಮಕ್ಕಳನ್ನು ಕೂಡಾ ಕೊಲ್ಲುತ್ತದೆ" ಎಂದನು.

ಆತ ಹೀಗೆ ಹೇಳಿದ್ದನ್ನು ಕೇಳಿ ಆಗಲೇ ಅರಸ ತನ್ನ ಗುಂಪಿನೊಂದಿಗೊಡಗೂಡಿ ಹೊರಕ್ಕೆ ಹೊರಟನು. ಆಗ ಬ್ರಾಹ್ಮಣ ಹಕ್ಕಿಗಳನ್ನು ಓಡಿಸಿ ಮತ್ತೆ ಮಂಚದ ಮೇಲೆ ಕುಳಿತುಕೊಂಡು "ಓ ಅರಸನೇ, ಯಾಕೆ ಹೋಗುತ್ತಿ, ಕ್ಷೇತ್ರದಲ್ಲಿ ಉತ್ತಮ ಫಲಗಳಿವೆ, ಬೇಕಾದುದನ್ನು ತಿನ್ನು" ಎಂದು ಹೇಳಿದ. ಬ್ರಾಹ್ಮಣನ ಮಾತನ್ನು ಕೇಳಿ ಎಲ್ಲಾ ಜನಗಳೊಂದಿಗೊಡಗೂಡಿ ಅರಸ ಒಳ ಪ್ರವೇಶಿಸಿದ. ಆಗ ಪಕ್ಷಿಗಳನ್ನು ಓಡಿಸಲೆಂದು ಮಂಚದಿಂದ ಇಳಿದ ಬ್ರಾಹ್ಮಣ ಮತ್ತೆ ಮೊದಲಿನಂತೆಯೇ ಹೇಳಿದನು.

ಭೋಜರಾಜ ತನ್ನ ಮನದಲ್ಲಿಯೇ 'ಇದೊಂದು ಆಶ್ಚರ್ಯ! ಯಾವಾಗ ಈ ಬ್ರಾಹ್ಮಣ ಮಂಚದಲ್ಲಿ ಕುಳಿತುಕೊಳ್ಳುತ್ತಾನೋ ಆಗ ಆತನ ಮನಸ್ಸಿನಲ್ಲಿ ಕುಳಿತುಕೊಳ್ಳಬೇಕು, ಊಟಮಾಡಬೇಕು ಎಂಬ ಆಲೋಚನೆ ಹುಟ್ಟುತ್ತದೆ. ಯಾವಾಗ ಮಂಚದಿಂದ ಇಳಿಯುತ್ತಾನೋ ಆಗ ಆ ಆಲೋಚನೆ ಬರುವುದಿಲ್ಲ. ನಾನೂ ಅಲ್ಲಿ ಕುಳಿತು ಪರೀಕ್ಷಿಸುತ್ತೇನೆ' ಎಂದು ಆಲೋಚಿಸಿ ಯಾವಾಗ ಮಂಚದ ಮೇಲೆ ಕುಳಿತುಕೊಂಡನೋ ಆಗ ಆತನ ಮನಸ್ಸಿನಲ್ಲಿಯೂ ಅದೇ ರೀತಿ ಕಂಡಿತು. 'ನಿಜ. ಲೋಕದ ದು:ಖವನ್ನು ಪರಿಹಾರ ಮಾಡಬೇಕು, ಲೋಕದ ದಾರಿದ್ರ್ಯವನ್ನು ನಿವಾರಣೆ ಮಾಡಬೇಕು, ದುಷ್ಟರನ್ನು ದಂಡಿಸಬೇಕು, ಸಜ್ಜನರನ್ನು ಪರಿಪಾಲನೆ ಮಾಡಬೇಕು, ಧರ್ಮದಿಂದ ಪ್ರಜೆಗಳನ್ನು ಪರಿಪಾಲನೆ ಮಾಡಬೇಕು ಎಂದು ತೋರಿದ್ದರಿಂದ ಆ ಸಮಯದಲ್ಲಿ ಪ್ರಧಾನಿ ಒಂದು ವೇಳೆ ಶರೀರವನ್ನು ಕೇಳಿ ಬೇಡಿಕೊಂಡಿದ್ದರೆ ಅದನ್ನೂ ಕೊಟ್ಟುಬಿಡುತ್ತಿದ್ದೆ' ಎಂಬ ಜ್ಞಾನ ಆತನಲ್ಲಿ ಹುಟ್ಟಿತು.

ಅರಸ ಮತ್ತೂ ಆ ಕ್ಷೇತ್ರದ ಮಹಾತ್ಮೆಯ ಬಗ್ಗೆ ಯೋಚಿಸಿ ಬ್ರಾಹ್ಮಣನನ್ನು ಕರೆದು "ಓ ಬ್ರಾಹ್ಮಣಾ, ಈ ಕ್ಷೇತ್ರದಲ್ಲಿ ನಿನಗೆ ಏನು ಲಾಭ ಹುಟ್ಟುತ್ತದೆ?" ಎಂದು ಕೇಳಿದ. ಆ ಬ್ರಾಹ್ಮಣನು "ಎಲ್ಲಾ ವಿದ್ಯೆಗಳಲ್ಲಿ ಸಮರ್ಥನಾದ ನಿನಗೆ ತಿಳಿಯದಿರುವುದು ಏನೂ

ಇಲ್ಲ. ಅರಸ ಸಾಕ್ಷಾತ್ ದೇವರು. ವಿಷ್ಣು ಎನ್ನುವಾತನೇ ಆ ಅವತಾರವಾದುದು. ಆತನ ದೃಷ್ಟಿ ಯಾರ ಮೇಲೆ ಬೀಳುತ್ತದೆಯೋ ಆತನ ಬಡತನ ನಾಶವಾಗುತ್ತದೆ. ಅರಸನ ಹೆಸರು ಸಾಕ್ಷಾತ್ ಕಲ್ಪವೃಕ್ಷ. ನೀನು ನನ್ನ ದೃಷ್ಟಿಗೆ ಕಾಣಸಿಕ್ಕಿದೆ, ದಾರಿದ್ರ್ಯಕ್ಕೆ ಕಡೆಕಾಲ ಖಂಡಿತವಾಯಿತು" ಎಂದನು.

ಆಗ ಅರಸನು ಬ್ರಾಹ್ಮಣನಿಗೆ ಧನ ಮೊದಲಾದವುಗಳನ್ನು ಕೊಡಿಸಿ ಸಂತೋಷಪಡಿಸಿದ. ಕ್ಷೇತ್ರವನ್ನು ಪಡೆದುಕೊಂಡು ಮಂಚದ ಕೆಳಗೆ ಅಗೆಸಲು ಪ್ರಾರಂಭಿಸಿದ. ಒಂದಾಳಿನಷ್ಟು ಆಳವಾದಾಗ ಅಪೂರ್ವವಾಗಿರುವಂತಹ ಒಂದು ಶಿಲೆ ಕಂಡು ಬಂತು. ಆ ಶಿಲೆಯ ಕೆಳಗೆ ಚಂದ್ರಕಾಂತ ಶಿಲೆ ಒಡಗೂಡಿ ನಾನಾ ಪ್ರಕಾರ ರತ್ನ ಕಟ್ಟಿದ ಮೂವತ್ತೆರಡು ಪುತ್ಥಳಿ ಬೊಂಬೆಗಳಿಂದ ಕೂಡಿದ್ದ ಸಿಂಹಾಸನ ಕಾಣಿಸಿತು. ಆ ಸಿಂಹಾಸನವನ್ನು ನೋಡಿ ಭೋಜರಾಜ ಬಹಳ ಸಂತೋಷ ತುಂಬಿದ ಮನದವನಾಗಿ ಸಿಂಹಾಸನವನ್ನು ಕೊಂಡೊಯ್ಯಲೆಂದು ಕದಲಿಸಿದನು. ಆಗ ಅದು ಮತ್ತೂ ಗಟ್ಟಿಯಾಯಿತು, ಕದಲಲಿಲ್ಲ. ಆಗ ಮಂತ್ರಿಯ ಬಳಿ "ಓ ಮಂತ್ರಿಗಳೇ, ಯಾಕಾಗಿ ಈ ಸಿಂಹಾಸನ ಅಲುಗಾಡುವುದಿಲ್ಲ" ಎಂದು ಕೇಳಿದನು. ಮಂತ್ರಿಗಳು "ಈ ಸಿಂಹಾಸನ ದಿವ್ಯ ಅಪರೂಪವಾಗಿರುವಂತಹುದು, ಬಲಿ ಹೋಮ ಪೂಜೆ ಮೊದಲಾದವುಗಳಲ್ಲದೆ ಅಲುಗಾಡುವುದಿಲ್ಲ" ಎಂದು ಹೇಳಿದರು. ಆ ಮಾತು ಕೇಳಿ ಬ್ರಾಹ್ಮಣರನ್ನು ಕರೆಸಿ ಅವರಿಂದ ಎಲ್ಲಾ ವಿಧಿವಿಧಾನಗಳನ್ನು ಮಾಡಿಸಿದನು. ಆಗ ಆ ಸಿಂಹಾಸನ ಲಘುವಾಗಿ ತಾನೇ ಅಲುಗಾಡಿತು.

ಅದನ್ನು ನೋಡಿ ಅರಸನು ಮಂತ್ರಿಯ ಬಳಿ "ಆಶ್ಚರ್ಯ! ಬುದ್ಧಿವಂತರ ಸಂಗಲಾಭವು ಶುಭಕ್ಕೂ, ಸುಖಕ್ಕೂ ಆಗುತ್ತದೆ" ಎಂದನು. ಆಗ ಮಂತ್ರಿಯು "ಓ ಅರಸನೇ ಕೇಳು. ಯಾರಾದರೂ ತಾನೇ ಬುದ್ಧಿವಂತನಾಗುವುದಿಲ್ಲ. ಮತ್ತೊರ್ವನ ಬುದ್ಧಿಮಾತನ್ನು ಕೇಳದಿದ್ದರೆ ಆತ ಹೇಗಾದರೂ ಹಾಳಾಗಿ ಹೋಗುತ್ತಾನೆ. ನೀನು ಆ ಪ್ರಕಾರ ಮಾಡಲಿಲ್ಲ. ಬುದ್ಧಿಯಿದ್ದವನಾದರೂ ಸ್ನೇಹಿತನ ಮಾತನ್ನು ಕೇಳುತ್ತಾನೆ. ಅದರಿಂದ ಯಾವ ಕಾರ್ಯವೂ ನಾಶವಾಗುವುದಿಲ್ಲ" ಎಂದು ಹೇಳಿದ.

ಅರಸ 'ಯಾರು ರಾಜನ ಅನರ್ಥ ಕಾರ್ಯವನ್ನು ತಡೆಯುತ್ತಾನೆಯೋ ಕಾರ್ಯವನ್ನು ಸಾಧಿಸಿ ಕೊಡುತ್ತಾನೆಯೋ ಅವನೇ ಮಂತ್ರಿ ಎಂದು ಹೇಳಿದೆ' ಎಂಬಿತ್ಯಾದಿಯಾಗಿ ಶ್ರೇಷ್ಠನಾದ ಮಂತ್ರಿಯ ಕುರಿತು ಹೇಳಿದನು. ಅದಕ್ಕೆ ಮಂತ್ರಿಯು ಅರಸರ ಹಿತವನ್ನು, ಮಂತ್ರಿಗಳ ಮಹತ್ವವನ್ನು ಮತ್ತು ಅವರ ಗುಣಗಳ ಕುರಿತು ವಿವರಿಸುತ್ತಾ 'ಮಂತ್ರಿ ಇಲ್ಲದ ಅರಸ ಧಾನ್ಯ ಇಲ್ಲದ ಕ್ಷೇತ್ರ, ಪ್ರಾಯ ಇಲ್ಲದ ಸೌಭಾಗ್ಯ ದುರ್ಜನರಿಗೆ ಹಿತ, ಪಾಶಾಂಡಿಗಳಿಗೆ ಬುದ್ಧಿ, ವೇಶ್ಯೆಯರಲ್ಲಿನ ಪ್ರೀತಿ, ದುಷ್ಟರೊಂದಿಗೆ ಮಿತ್ರಸ್ನೇಹ, ಅಪರಾಧಿಯಾಗಿರುವ ಮನುಷ್ಯನಿಗೆ ಸ್ವಾತಂತ್ರ್ಯ, ಲೋಭಿಗೆ ಮನೆ, ಸೂಳೆಗೆ ಪುರುಷರಲ್ಲಿ ವಿಶ್ವಾಸ ಈ ಎಲ್ಲಾ ಕಾರ್ಯವೂ ಪ್ರಯೋಜನವಿಲ್ಲದ್ದಾಗಿದೆ. ಹಿರಿಯರ, ಸಜ್ಜನರ ಸೇವೆ ಮಾಡಲು, ಸ್ನೇಹಿತರ ಬುದ್ಧಿಮಾತು ಕೇಳಲು, ದೇವರ, ಬ್ರಾಹ್ಮಣರ

ಸೇವೆ ಮಾಡಲು, ನ್ಯಾಯ ಮಾರ್ಗದಿಂದ ಇರಲು ಬೇಕಾಗಿರುವ ಲಕ್ಷಣಗಳೆಲ್ಲವೂ ನಿನ್ನಲ್ಲಿ ಇದೆ. ನೀನು ಎಲ್ಲಾ ಅರಸರಿಗೂ ಹಿರಿಯನಾಗಿ ಇರುವವನು. ಮಂತ್ರಿಯು ಸಕಲ ಶಾಸ್ತ್ರವನ್ನರಿತು ಸ್ವಾಮಿ ಕಾರ್ಯ ಮೊದಲಾದ ಕೆಲಸದಲ್ಲಿ ಯುಕ್ತವಾಗಿ ತೊಡಗಿರಬೇಕು. ಪಾಪದಿಂದಾಗಿ ಭಯ, ಪ್ರಜೆಗಳ ಉತ್ತಮ ಪರಿಪಾಲನೆ, ಸೇವೆಯ ಜನಗಳನ್ನೆಲ್ಲಾ ಸೇರಿಸುವುದು, ಅರಸರನ್ನು ಅನುಸರಿಸುವುದು, ಅರಸರ ಕಾಲೋಚಿತವಾಗಿರುವ ಬುದ್ಧಿಯನ್ನು– ಯಜಮಾನನ ಮನಸ್ಸನ್ನು ಅನುಸರಿಸುವುದು ಈ ಪ್ರಕಾರ ಗುಣವಿದ್ದವನು ಮಂತ್ರಿಸ್ಥಾನಕ್ಕೆ ಯೋಗ್ಯತೆ ಇರುವವನಾಗುತ್ತಾನೆ. ಇಂತಹ ಗುಣಗಳು ಇಲ್ಲದವನು ಯೋಗ್ಯನಾಗುವುದಿಲ್ಲ. ಹೀಗೆಯೇ ಮಂತ್ರಿಯಿಂದಾಗಿ ನಂದರಾಜನು ಬ್ರಹ್ಮಹತ್ಯೆಯಿಂದ ಪಾರಾದನು' ಎಂದು ಹೇಳಿದನು.

ಆಗ ಭೋಜರಾಜನು "ಅದು ಹೇಗೆ" ಎಂದು ಕೇಳಿದನು. ಅದಕ್ಕೆ ಮಂತ್ರಿಯು "ಓ ಅರಸನೇ ಕಥೆಯನ್ನು ಕೇಳು. ವಿಶಾಲ ಎನ್ನುವ ಪಟ್ಟಣದಲ್ಲಿ ಪರಾಕ್ರಮಿಯಾಗಿದ್ದ ನಂದ ಎಂಬ ಅರಸನಿದ್ದನು. ತನ್ನ ಭುಜಬಲದಿಂದಾಗಿ ಆತನ ಮಗ ಜಯಶೀಲನಾದ. ಆ ಮಗ ಮೂವತ್ತೊಂದು ಬಗೆ ವಿದ್ಯೆಯ ವಿಧಾನವನ್ನು ತಿಳಿದವನು. ಆತನ ಮಂತ್ರಿಯೂ ಬಹಳ ಖ್ಯಾತಿ ಇರುವವನು. ಆ ಅರಸನ ಹೆಂಡತಿ ಭಾನುಮತಿ ಎನ್ನುವವಳು. ಆಕೆ ಅರಸನಿಗೆ ಬಹಳ ಪ್ರೀತಿಯವಳು. ಆ ಅರಸ ಆಕೆಗೆ ಮರುಳಾಗಿ ಆಕೆಯೊಂದಿಗೆ ಕ್ರೀಡಿಸುತ್ತಾ ಇದ್ದ. ಅರಸ ಯಾವಾಗ ಸಿಂಹಾಸನವೇರುತ್ತಾನೋ ಆಗ ಅರಸನ ತೊಡೆಯಲ್ಲಿ ಭಾನುಮತಿ ಕುಳಿತುಕೊಳ್ಳುವಳು. ಒಂದು ಕ್ಷಣವಾದರೂ ಆಕೆಯನ್ನು ಬಿಟ್ಟಿರುವುದಿಲ್ಲ.

ಒಂದು ಸಲ ಮಂತ್ರಿ ತನ್ನಲ್ಲೇ ವಿಚಾರ ಮಾಡಿದ. 'ಸೊಗಸು! ಚೆನ್ನಾಗಿದೆ! ಅರಸನೇ ನಾಚಿಕೆಯಿಲ್ಲದವನಾಗಿ ಸಭೆಯ ಮಧ್ಯದಲ್ಲಿ ಸಿಂಹಾಸನದಲ್ಲಿ ಈ ಸ್ತ್ರೀಯನ್ನು ಕುಳ್ಳಿರಿಸಿಕೊಂಡರೆ ಎಲ್ಲಾ ಜನರೂ ಆಕೆಯುನ್ನು ನೋಡುತ್ತಾರೆ. ಬಹಳ ಅಯೋಗ್ಯವಾದುದು. ಅಲ್ಲದೆ ಕಾಮೇಚ್ಛೆ ಇದ್ದ ಸ್ತ್ರೀಗೆ ಯೋಗ್ಯ ಅಯೋಗ್ಯ ಎನ್ನುವುದು ತಿಳಿಯುವುದಿಲ್ಲವೆಂದು ಹೇಳಿದೆ. ಕುಟಿಲ ಕಣ್ಣುಗಳುಳ್ಳ ಸ್ವರ್ಗಲೋಕದ ಸ್ತ್ರೀಯರಿದ್ದಾರೆ. ಸ್ವರ್ಗಾಧಿಪತಿಯಾದ ದೇವೇಂದ್ರನೂ ತಪಸ್ಸು ಮಾಡಿದ್ದ ಋಷಿಯ ಹೆಂಡತಿಯಾದ ಅಹಲ್ಯೆಯನ್ನು ಸಂಭೋಗ ಮಾಡಿದ. ಮನಸ್ಸನ್ನು ಕಾಮಭಾವದಿಂದ ಪೀಡಿಸಿಕೊಂಡ ಮನುಷ್ಯ ಪಂಡಿತನಾದರೂ ಉಚಿತ ಅನುಚಿತವಾದುದನ್ನು ತಿಳಿಯುವುದಿಲ್ಲ. ಯಾವ ರಾಜ ಸ್ತ್ರೀಯ ಕಡೆಕಣ್ಣ ಬಾಣದಿಂದ ಭೇದಿಸಿಕೊಳ್ಳುತ್ತಾನೋ ಆತ ಆಗಲೇ ನಾಚಿಕೆ ಬಿಡುತ್ತಾನೆ, ಧೈರ್ಯವನ್ನೂ ತಂದುಕೊಳ್ಳುತ್ತಾನೆ. ಅದು ಎಂಥವನನ್ನೂ ಸಾಧು ಮಾಡುತ್ತದೆ, ಎಂತದ್ದನ್ನೂ ಸಾಧ್ಯವಾಗಿಸುತ್ತದೆ. ಓ ಅರಸನೇ ಇದು ಸತ್ಯ. ತಪಸ್ಸು ಶೀಲಗಳಿದ್ದವನು, ಜ್ಞಾನಿಯಾಗಿದ್ದವನು, ಬಹಳ ಧನವಿರುವವನಾಗಿದ್ದರೂ ಅಜ್ಞಾನಿಯಾಗಿದ್ದ ಮನುಷ್ಯನನ್ನು ಹೆಣ್ಣೆನ್ನುವ ಬೆಂಕಿ ಕಟ್ಟಿಗೆಯನ್ನು ಸುಟ್ಟಂತೆ ಮಾಡಿ ಬಿಡುತ್ತದೆ. ದುಡ್ಡು ವೃದ್ಧಿ ನಾಶ ಮಾಡುತ್ತದೆ. ತಮ್ಮ ಅವಸ್ಥೆಯೂ ಮರಣಾವಸ್ಥೆಯೂ

ಸ್ತ್ರೀಯಿಂದಾಗಿ ಆಗುತ್ತದೆ. ಆತ ಲೋಕವನ್ನು ನೋಡುವುದಿಲ್ಲ' ಹೀಗೆ ಮನಸ್ಸಿನಲ್ಲಿ ಆಲೋಚಿಸಿ ಒಂದು ಸಲ ಅರಸನ ಬಳಿ ಬಂದು ಮಾತನಾಡಿದ, "ಓ ಅರಸನೇ ಹೇಳಿಕೊಳ್ಳುವುದಿದೆ" ಎಂದ. ಅರಸ "ಏನು ಹೇಳು" ಎಂದನು. "ಯಾವ ಕಾರಣದಿಂದಾಗಿ ಭಾನುಮತಿ ಸಭೆಯ ಮಧ್ಯದಲ್ಲಿ ಅರ್ಧಾಸನದಲ್ಲಿ ಕುಳಿತುಕೊಳ್ಳುತ್ತಾಳೆ? ಬಹಳ ಅಯೋಗ್ಯವಾದ ಕಾರ್ಯವನ್ನು ಮಾಡುತ್ತಿದ್ದಿ, ರಾಜ ಶರಾಸನ ಎಂಬುದು ಶಾಸ್ತ್ರಕಾರನ ಮಾತು. ಅಲ್ಲದೆ ವಿವಿಧ ಪ್ರಕಾರದ ಜನರು ಬಂದು ಆಕೆಯನ್ನು ನೋಡುತ್ತಾರೆ" ಎಂದಾಗ ಅರಸನು "ಎಲ್ಲವೂ ತಿಳಿಯುತ್ತದೆ. ನನಗೆ ಏನೋ ಯಾಕೋ ಆಕೆಯಲ್ಲಿ ಬಹಳ ಪ್ರೀತಿ. ನಾನು ಆಕೆಯನ್ನು ಬಿಟ್ಟು ಒಂದು ಕ್ಷಣವಾದರೂ ಇರಲಾಗದು" ಎಂದು ಹೇಳಿದನು. ಅದಕ್ಕೆ ಮಂತ್ರಿಯು "ಚಿತ್ರಗಾರನನ್ನು ಕರೆಸಿ ಆತನಿಂದ ಬಟ್ಟೆಯ ಮೇಲೆ ಭಾನುಮತಿ ರೂಪವನ್ನು ಬರೆಸಿ ಮುಂದಿರಿಸಿ ನೋಡಲು ಅನುಮಾಡಿದರೆ ಆಗದೇ" ಎಂದನು.

ಆಗ ಅರಸನು ಚಿತ್ರಕಾರನನ್ನು ಕರೆಸಿ "ಓ ಚಿತ್ರಗಾರನೇ ಭಾನುಮತಿಯ ರೂಪವನ್ನು ಚಿತ್ತಾರದಲ್ಲಿ ಬರೆಯಬೇಕು" ಎಂದು ಹೇಳಿದ. ಕಲೆಗಾರನು "ಓ ದೇವರೇ, ಮೊದಲು ಆಕೆಯನ್ನು ನೋಡಿ ನಂತರ ಚಿತ್ರ ಬರೆಯಬಹುದು" ಎಂದನು. ಅದನ್ನು ಕೇಳಿ ಭಾನುಮತಿಯನ್ನು ಕರೆಸಿ ಆತನಿಗೆ ತೋರಿಸಿದನು. ಕಲೆಗಾರನು ಆ ಸ್ತ್ರೀಯನ್ನು ನೋಡಿ ಪದ್ಮಿನಿಯೆಂದು ಅರಿತು ಪದ್ಮಿನಿ ಜಾತಿಯ ಲಕ್ಷಣವಿರುವ ಅಂದವಾದ ಚಿತ್ರವನ್ನು ಅರಸರಿಗೆ ಸಮರ್ಪಿಸಿದನು. ಅರಸ ಚಿತ್ರಗಾರನು ಬರೆದ ಚಿತ್ರವನ್ನು ನೋಡಿ ಸಂತೋಷಿಸಿದ. ಆ ಚಿತ್ರ ಬರೆದವನಿಗೆ ಯೋಗ್ಯವಾದ ಉಡುಗೊರೆಯನ್ನು ನೀಡಿದನು.

ಆ ಬಳಿಕ ರಾಜಗುರುವಾಗಿದ್ದ ಶರದಾನಂದನು ಬಟ್ಟೆಯಲ್ಲಿ ಬರೆದ ಚಿತ್ರವಾಗಿದ್ದ ಭಾನುಮತಿಯ ರೂಪವನ್ನು ನೋಡಿ ಚಿತ್ತಾರದವನನ್ನು "ಓ ಚಿತ್ತಾರಗಾರನೇ, ಭಾನುಮತಿಯ ಲಕ್ಷಣಗಳನ್ನೆಲ್ಲಾ ಬರೆದು ಒಂದು ಉತ್ತಮ ಲಕ್ಷಣವನ್ನು ಮರೆತು ಬಿಟ್ಟೆಯಲ್ಲಾ" ಎಂದು ಕೇಳಿದನು. ಚಿತ್ರಗಾರ "ಓ ದೇವರೇ, ಮರೆತು ಬಿಟ್ಟದ್ದು ಏನೆಂದು ಹೇಳಿ" ಎಂದನು. "ಆಕೆಯ ಎಡದ ತೊಡೆಯಲ್ಲಿ ತಿಲಕಕ್ಕೆ ಸಮಾನವಾದ ಮತ್ಸ್ಯಲಾಂಛನವಿದೆ. ಅದನ್ನು ನೀನು ಬರೆದಿಲ್ಲ" ಎಂದು ಹೇಳಿದನು.

ಅದನ್ನು ಪರೀಕ್ಷಿಸಲೆಂದು ಅರಸನು ಕ್ರೀಡಿಸುವ ಸಂದರ್ಭದಲ್ಲಿ ಆಕೆಯ ಎಡದ ತೊಡೆಯುನ್ನು ನೋಡಿದನು. ಅಲ್ಲಿ ತಿಲಕಕ್ಕೆ ಸಮಾನವಾಗಿದ್ದ ಒಂದು ಮತ್ಸ್ಯಲಾಂಛನವಿದ್ದಿತು. ಅದನ್ನು ನೋಡಿ ಅರಸ ತನ್ನ ಮನಸ್ಸಿನಲ್ಲಿಯೇ 'ಈ ಮತ್ಸ್ಯಲಾಂಛನ ಅಂತರಂಗ ಸ್ಥಳದಲ್ಲಿರುವಂತಹುದು, ಆತ ಹೇಗೆ ಗಮನಿಸಿದ? ಏನಾದರೂ ಆ ಶರದಾನಂದನಿಗೆ ಆಕೆಯ ಸಂಭೋಗ ಸಂಸರ್ಗವಿದೆ, ಅಲ್ಲದಿದ್ದರೆ ಇದು ಹೇಗೆ ಆತನಿಗೆ ತಿಳಿಯಿತು? ಆದರೂ ಹೆಂಗಸರ ವಿಷಯದಲ್ಲಿ ತಾನು ಸಂದೇಹ ಪಡಲಾಗದು. ಒಬ್ಬನನ್ನು ಹೆದರಿಸುವಳು, ಒಬ್ಬನ ಮೇಲೆ ಮನಸ್ಸು, ಒಬ್ಬನನ್ನು ನೋಡುತ್ತಾಳೆ, ಮನಸ್ಸಲ್ಲಿದ್ದುದನ್ನು ಚಿಂತೆ ಮಾಡುತ್ತಾಳೆ. ಹೆಂಗಸರಿಗೆ ಮನಸ್ಸೂ,

ರತಿವಿಷಯವೂ ವಶದಲ್ಲಿರುವುದಿಲ್ಲ. ಬೆಂಕಿಗೆ ಎಷ್ಟು ಕಟ್ಟಿಗೆ ಹಾಕಿದರೂ ತೃಪ್ತಿಯಾಗುವುದಿಲ್ಲ. ಗಂಡಸರಿಗೆ ಹೆಂಗಸರ ಮೇಲೆ ಇದ್ದ ಮನಸ್ಸೂ ಮುಗಿಯಿತು ಎಂದಿಲ್ಲ. ಯಾವ ಮನುಷ್ಯ ಸ್ತ್ರೀಯರನ್ನು ನಂಬುತ್ತಾನೋ ಆತ ಅಜ್ಞಾನಿಯಾದವನು. ನನ್ನ ಹೆಂಡತಿ ಆತನ ಅಧೀನವಾಗಿ ಕ್ರೀಡಿಸಿಕೊಂಡೂ ಆಯಿತು' ಎಂದು ಚಿಂತಿಸಿದ. ಈ ಪ್ರಕಾರ ಯೋಚಿಸಿ ಮಂತ್ರಿಯನ್ನು ಕರೆಸಿ ಪೂರ್ವದ ಸಂಗತಿಯನ್ನು ಹೇಳಿದ. ಮಂತ್ರಿಯೂ ಆತನನ್ನು ಸಂತೈಸಿ ಆ ಸಮಯಕ್ಕೆ ತಕ್ಕುದಾದುದನ್ನು ಹೇಳಿದ.

ಅರಸನು "ಓ ಮಂತ್ರಿಯೇ, ನೀನು ನನಗೆ ಪ್ರಿಯವಾದವನೆಂದಾದರೆ ಆ ಶರದಾನಂದನನ್ನು ಕೊಲ್ಲು" ಎಂದನು. ಮಂತ್ರಿಯೂ "ಹಾಗೆಯೇ ಆಗಲಿ" ಎಂದು ಜನರೆದುರು ಶರದಾನಂದನನ್ನು ಬಂಧಿಸುತ್ತಾ ಇರುವಾಗ ಶರದಾನಂದನು "ಇದೊಂದು ಆಶ್ಚರ್ಯ! ಅರಸನೇ, ಯಾರಿಗೆ ಇಷ್ಟವಾಗುತ್ತದೆ. ಎಂದು ಆಯುಷ್ಯವಿದ್ದವನನ್ನು ಹೆದರಿಸುತ್ತಿ?" ಎಂದು ಹೇಳಿದ.

'ಅರಸರು ಕೋಪಿಸಿದ್ದರಿಂದಾಗಿ ಕುಲದಲ್ಲಿ ಉತ್ತಮನಾಗಿರುವ ಮನುಷ್ಯ ಕುಲಹೀನನಾಗುತ್ತಾನೆ. ಸತ್ಯವೋ ಮಿಥ್ಯವೋ ಯಾಕಾಗಿ ಬ್ರಾಹ್ಮಣ ವಧೆ ಮಾಡಬೇಕು? ಬಹಳ ಅನುಚಿತವಾದುದು' ಎಂದುಕೊಂಡು ಮಂತ್ರಿಯು ಶರದಾನಂದನನ್ನು ಮತ್ತೊಬ್ಬರಿಗೆ ತಿಳಿಯದಂತೆ ತನ್ನ ಮನೆಗೆ ಕರೆದುಕೊಂಡು ಹೋಗಿ ನೆಲಮಾಳಿಗೆಯಲ್ಲಿರಿಸಿದ. ಅರಸನ ಬಳಿಗೆ ಬಂದು "ಓ ಅರಸನೇ, ನಿನ್ನ ಅಪ್ಪಣೆಯ ಪ್ರಕಾರ ಮಾಡಿದೆ" ಎಂದ. ಅರಸ "ಒಳ್ಳೆಯದೇ ಮಾಡಿದೆ" ಎಂದ.

ತದನಂತರದಲ್ಲಿ ಅರಸನ ಮಗ ಜಯಪಾಲ ಮೃಗ ಬೇಟೆಗೆ ವನಕ್ಕೆ ಹೋಗಲು ಇಚ್ಚಿಸಿದನು. ಹಾಗೆ ಹೊರಟ ಸಮಯದಲ್ಲಿ ಅಪಶಕುನವಾಯಿತು. ಅಕಾಲದಲ್ಲಿ ಮಳೆ, ಭೂಕಂಪ ಇದೇ ಮೊದಲಾಗಿರುವ ಅನಿಷ್ಟಗಳಾದವು. ಆತನನ್ನು ತಡೆಯಲೆಂದು ಸ್ನೇಹಿತರೂ ಹೋದರು. ಆ ಸಮಯದಲ್ಲಿ ಮಂತ್ರಿಯ ಮಗನಾದ ಬುಧಿಸಾಗರ "ಓ ಜಯಪಾಲ, ಈಗ ಬೇಟೆಗೆ ಹೋಗಬೇಡ, ಬಹಳ ಅಪಶಕುನ ಕಾಣಿಸುತ್ತಿದೆ" ಎಂದನು. ಆಗ ಜಯಪಾಲ "ಈ ಅಪಶಕುನವನ್ನು ನಿರಾಕರಿಸಿ ಹೋಗಬೇಕು" ಎಂದು ಹೇಳಿದನು. ಬುಧಿಸಾಗರನು "ಅರಸು ಮಗ ಬುದ್ಧಿವಂತನಾಗಿರುವುದರಿಂದ ಅನಿಷ್ಟವಾಗಿರುವ ಅಪಶಕುನಕ್ಕೆ ಬದಲು ಕಾಣಿಸುವುದಿಲ್ಲ. ಜ್ಞಾನವಿದ್ದ ಮನುಷ್ಯ ವಿಷವನ್ನು ಕುಡಿಯುವುದಿಲ್ಲ, ಸರ್ಪಗಳೊಂದಿಗೊಡಗೂಡಿ ಆಟವಾಡಲಾರ, ಸಂನ್ಯಾಸಿಗಳ ಸಮೂಹವನ್ನು ನಿಂದೆ ಮಾಡಲಾರ, ಬ್ರಹ್ಮದ್ವೇಷವನ್ನೂ ಮಾಡಲಾರ" ಎಂದನು. ಈ ಪ್ರಕಾರ ಆತ ತಡೆದರೂ ವಿದ್ವಾಂಸರನ್ನು ಆದರಣೆ ಮಾಡಿ ಅರಸನ ಮಗ ಹೊರಟನು. ಮತ್ತೂ ಹೊರಟ ಸಮಯದಲ್ಲಿ ಆತ "ಓ ಜಯಪಾಲ ನಿನಗೆ ನಾಶಕಾಲ ಬಂತು, ಇಲ್ಲದಿದ್ದರೆ ವಿಪರೀತ ಬುದ್ಧಿ ಹುಟ್ಟುವುದಿಲ್ಲ ಎಂದು ಹೇಳಿದೆ. ವೇಶ್ಯೆಯರಿಗೆ ಮನಸ್ಸು ಶುದ್ಧವಿರುವುದಿಲ್ಲ, ಐಶ್ವರ್ಯಕ್ಕೆ ಸ್ಥಿರವಿರುವುದಿಲ್ಲ, ಮೂರ್ಖರಿಗೆ ವಿವೇಕ ಬುದ್ಧಿ ಇರುವುದಿಲ್ಲ, ಸತ್ಕರ್ಮಕ್ಕೆ ನಾಶವಿಲ್ಲ ಎಂಬ ನೀತಿ ಇದೆ" ಎಂದು ಹೇಳಿದನು.

ಆಗ ಅರಸನ ಮಗ ವನಕ್ಕೆ ಹೋಗಿ ಬಹಳ ಆಪತ್ತನ್ನೂ ಸಂಪಾದಿಸಿದ. ಕೃಷ್ಣಮೃಗವನ್ನು ಕಂಡು ಅದನ್ನು ಹಿಂಬಾಲಿಸಿ ದೊಡ್ಡ ಕಾಡನ್ನು ಪ್ರವೇಶಿಸಿದ. ಹಿಂದೆ ನೋಡಿದಾಗ ಸೈನ್ಯವಿರಲಿಲ್ಲ, ಅವರೆಲ್ಲಾ ನಗರಕ್ಕೆ ಬಂದಿದ್ದರು. ಕೃಷ್ಣಮೃಗವೂ ಅಲ್ಲಿ ಕಾಣಿಸಲಿಲ್ಲ. ಆತನೊಬ್ಬನೆ ಕುದುರೆಯಲ್ಲಿ ಕುಳಿತು ಪಟ್ಟಣವನ್ನು ಕಾಣದೆ ಅಲ್ಲಿ ಕುದುರೆಯಿಂದ ಇಳಿದನು. ಮರದ ಕೊಂಬೆಗೆ ಕುದುರೆಯನ್ನು ಕಟ್ಟಿ, ನೀರು ಕುಡಿದು ಮರದ ಕೊಂಬೆಯಲ್ಲಿ ಕುಳಿತ. ಆಗ ಬಹಳ ಭಯಂಕರವಾಗಿದ್ದ ಹುಲಿಯೊಂದು ಬಂದಿತು. ಆ ಹುಲಿಯನ್ನು ಕಂಡು ಕುದುರೆಯು ಕಟ್ಟಿದ್ದ ಹಗ್ಗ ಕಡಿದುಕೊಂಡು ನಗರದ ಮಾರ್ಗದಲ್ಲಿ ಓಡಿ ಹೋಯಿತು. ಅರಸನ ಮಗನೂ ಭಯದಿಂದಾಗಿ ಬೆವರಿದ ಶರೀರ ಹೊಂದಿದವನಾಗಿ ಮರವನ್ನು ಅಪ್ಪಿ ಹಿಡಿದು ಮರದ ಮೇಲಕ್ಕೆ ಹೋದನು. ಆ ಮೊದಲೇ ಮರದ ಮೇಲೆ ಹೋಗಿದ್ದ ಭಲ್ಲೂಕವನ್ನು ಕಂಡು ಮತ್ತೆ ಬಹು ಭಯಭೀತನಾದ. ಆ ಭಲ್ಲೂಕವು “ಓ ಅರಸು ಮಗನೇ, ಹೆದರಬೇಡ. ನೀನು ನನ್ನ ಶರಣಾಗತ. ಆ ಕಾರಣದಿಂದಾಗಿ ನಿನಗೆ ನಾನು ಏನೂ ಅನಿಷ್ಟವನ್ನು ಮಾಡುವುದಿಲ್ಲ, ನನ್ನಲ್ಲಿ ವಿಶ್ವಾಸವಿರಿಸು, ಹುಲಿಯಿಂದಾಗಿ ಭಯಬೀಳದಿರು. ಶರಣಾಗತನಾಗಿದ್ದವನನ್ನು ರಕ್ಷಣೆ ಮಾಡುವುದು ಮಹಾ ಪುಣ್ಯ ಎಂದು ಹೇಳಿದೆ. ಒಂದು ಯಜ್ಞಕ್ಕೆ ಬೇಕಾಗಿರುವ ದಕ್ಷಿಣೆ ಮೊದಲಾದವು ಎಷ್ಟು ಪುಣ್ಯವೋ, ಭಯದಿಂದ ಹೆದರಿದ್ದವನ ಪ್ರಾಣ ರಕ್ಷಣೆಯೂ ಆ ಯಜ್ಞಕ್ಕೆ ಸಮವಾಗಿದೆ” ಎಂದು ಹೇಳಿತು. ಹಾಗೆ ಭಲ್ಲೂಕದಿಂದಾಗಿ ಅರಸು ಮಗ ವಿಶ್ವಾಸ ಹೊಂದಿದನು.

ಹುಲಿಯೂ ಮರದಡಿಗೆ ಬಂದಿತು. ಆಗ ಸೂರ್ಯಾಸ್ತಮಾನವಾಯಿತು. ಹುಲಿಯು “ಓ ಭಲ್ಲೂಕ, ಈತನು ಗ್ರಾಮವಾಸಿ, ಮೃಗಬೇಟೆ ಮಾಡಿ ನಮ್ಮನ್ನು ಕೊಲ್ಲಲು ಬರುತ್ತಾನೆ. ಆದ್ದರಿಂದ ಶತ್ರುವಾಗಿರುವಾತನನ್ನು ಯಾಕಾಗಿ ತೊಡೆಯಲ್ಲಿ ಮಲಗಿಸಿಕೊಂಡಿದ್ದಿ? ಆತನು ಮನುಷ್ಯ, ಮನುಷ್ಯರಿಗೆ ಮಾಡಿದ ಉಪಕಾರ ಎಂಬುದಿಲ್ಲ, ಎದುರಲ್ಲಿ ಹೋಗಲು ಹೇಳಿ ಹಿಂದಿನಿಂದ ಕೊಂದಾನು, ನೀನು ಉಪಕಾರ ಮಾಡಿದರೂ ಆತ ಅಪಕಾರವನ್ನೇ ನೆನೆಯುತ್ತಾನೆ. ಅದರಿಂದಾಗಿ ಆತನನ್ನು ಕೆಳಗೆ ಹಾಕು, ನಾನು ಆತನನ್ನು ತಿಂದು ಸುಖದಿಂದ ಹೋಗುತ್ತೇನೆ, ನೀನೂ ನಿನ್ನ ಸ್ಥಳಕ್ಕೆ ಹೋಗು” ಎಂದಿತು.

ಆಗ ಭಲ್ಲೂಕವು “ಈತನು ಎಂಥವನೇ ಆಗಲಿ, ಶರಣಾಗತನಾಗಿರುವವನು. ಈತನನ್ನು ಕೆಳಗೆ ಹಾಕುವುದಿಲ್ಲ. ಶರಣಾಗತನಾದವನನ್ನು ಕೆಳಗೆ ಹಾಕುವುದು ಬಹಳ ಪಾಪವೆಂದು ಹೇಳಿದೆ. ವಿಶ್ವಾಸದಲ್ಲಿ ಘಾತಕ, ಶರಣಾಗತನಿಗೆ ಘಾತಕ ಮಾಡಿದವನು ಸೂರ್ಯಚಂದ್ರಾದಿಗಳು ಇರುವಷ್ಟು ಸಮಯ ಭಯಂಕರವಾಗಿರುವ ನರಕಕ್ಕೆ ಬೀಳುತ್ತಾರೆ” ಎಂದು ಉತ್ತರಿಸಿತು.

ಅನಂತರ ಅರಸು ಮಗ ಎಚ್ಚರವಾದ. ಭಲ್ಲೂಕ “ಓ ಅರಸು ಮಗನೇ ನಾನು ಒಂದು ಕ್ಷಣ ನಿದ್ದೆ ಮಾಡಿಬಿಡುತ್ತೇನೆ, ನೀನು ಹೆದರಬೇಡ” ಎಂದಿತು. ಆತ “ಹಾಗೆಯೇ ಆಗಲಿ” ಎಂದ. ಆಗ ಭಲ್ಲೂಕವೂ ಅರಸು ಮಗನ ಬಳಿಯಲ್ಲಿ ನಿದ್ರಿಸಿತು. ಹುಲಿಯು

"ಓ ಅರಸು ಮಗನೇ, ಆತನಲ್ಲಿ ವಿಶ್ವಾಸವಿಡಬೇಡ. ಭಲ್ಲೂಕವೂ ಉಗುರು ಆಯುಧ ಹೊಂದಿರುವಂತಹುದು. ಅಲ್ಲದೆ ಈ ಭಲ್ಲೂಕ ಚಂಚಲ ಮನಸ್ಸು ಇರುವಂತಹುದು. ಆ ಕಾರಣದಿಂದಾಗಿ ಭಲ್ಲೂಕನ ದಯವು ಬಹಳ ಭಯ ನೀಡುವಂತಹುದು. ಕ್ಷಣದಲ್ಲಿ ಕೋಪ, ಕ್ಷಣದಲ್ಲಿ ಸಂತೋಷ, ವಿಶೇಷದಿಂದಾಗಿ ಸಂತುಷ್ಟಿ ಕ್ಷಣ ಕ್ಷಣದಲ್ಲಿ ಚಂಚಲ ಮನಸ್ಸಿನವರ ದಯವು ಬಹಳ ಭಯವಿರುವಂತಹುದು. ನಿನ್ನನ್ನು ತಿಂದು ತಾನೇ ಇರುತ್ತದೆ, ಆ ಕಾರಣದಿಂದಾಗಿ ನೀನೇ ಆ ಭಲ್ಲೂಕನನ್ನು ಕೆಳಗೆ ಹಾಕು, ನಾನು ಆ ಭಲ್ಲೂಕನನ್ನು ತಿಂದು ಹೊರಟು ಹೋಗುತ್ತೇನೆ, ನೀನೂ ನಿನ್ನ ಪಟ್ಟಣಕ್ಕೆ ಹೋಗು" ಎಂದು ಹೇಳಿತು.

ಅದನ್ನು ಕೇಳಿ ಅರಸು ಮಗನು ಭಲ್ಲೂಕವನ್ನು ಕೆಳಗೆ ಹಾಕಲೆಂದು ತಳ್ಳುವಾಗ ಆ ಭಲ್ಲೂಕವು ಮರದ ಕೊಂಬೆಯನ್ನು ಅಪ್ಪಿ ಹಿಡಿಯಿತು. ಆ ಭಲ್ಲೂಕವನ್ನು ನೋಡಿ ಅರಸು ಮಗ ಮತ್ತೆ ಹೆದರಿಕೊಂಡ. ಭಲ್ಲೂಕ "ಓ ಪಾಪಿಷ್ಠಾ, ಯಾಕಾಗಿ ಹೆದರುತ್ತಿ. ನಿನಗೆ ಏನೋ ಪೂರ್ವಾರ್ಜಿತ ಕರ್ಮ ಉಣ್ಣಲಿಕ್ಕಿದೆ, ಅದರಿಂದಾಗಿ ನೀನು 'ವಿಶ್ವಾಸ ಮೀರಿದೆ' ಎಂದು ಹೇಳುತ್ತಾ ಪಿಶಾಚಿಯಾಗು" ಎಂದಿತು.

ಅದರ ನಂತರ ನಸುಕಿನಲ್ಲಿಯೇ ಹುಲಿಯು ಆ ಮರದ ಬುಡದಿಂದ ಹೊರಟು ಹೋಯಿತು. ಭಲ್ಲೂಕವು ಆ ಅರಸು ಮಗನಿಗೆ ಶಾಪ ನೀಡಿ ತನ್ನ ಸ್ಥಳಕ್ಕೆ ಹೋಯಿತು, ಅರಸು ಮಗನೂ 'ವಿಶ್ವಾಸಮೀರಿದೆ' ಎನ್ನುತ್ತಾ ಪಿಶಾಚಿಯಾಗಿ ವನದಲ್ಲಿ ತಿರುಗತೊಡಗಿದನು. ಆ ಸಮಯದಲ್ಲಿ ಕುದುರೆಯು ಅರಸು ಮಗ ಇಲ್ಲದೇ ನಗರಕ್ಕೆ ಹೋಯಿತು. ಜನರು ಅರಸು ಮಗನಿಲ್ಲದ ಕುದುರೆಯನ್ನು ನೋಡಿ ಅರಸರ ಮುಂದೆ ಬಂದು ಹೇಳಿದರು. ಆ ಸಮಯದಲ್ಲಿ ಮಂತ್ರಿಯನ್ನು ಕರೆಸಿ "ಓ ಮಂತ್ರಿಯೇ ಯಾವ ಸಮಯದಲ್ಲಿ ನನ್ನ ಮಗ ವನಕ್ಕೆ ಮೃಗ ಬೇಟೆಗೆ ಹೋದನೋ ಆ ಸಮಯದಲ್ಲಿ ಬಹಳ ಅಪಶಕುನವಾಯಿತು. ಆಲೋಚನೆ ಮಾಡದೆ ಹೀಗೆ ಹೋದ, ಅವನಿಗೆ ಕಷ್ಟವಾದುದೇ ಸೈ, ಮಗನ ಕುದುರೆ ಮಗನಿಲ್ಲದೇ ಬಂತು, ಅವನನ್ನು ಹುಡುಕುವುದಕ್ಕಾಗಿ ವನಕ್ಕೆ ಹೋಗೋಣ" ಎಂದನು. ಮಂತ್ರಿಯು "ಸ್ವಾಮೀ, ಹಾಗೆ ಮಾಡುವುದು ಸರಿ" ಎಂದನು.

ಆಗ ಅರಸನು ಮಂತ್ರಿ, ಪರಿವಾರದೊಂದಿಗೆ ಮಗನು ಹೋದ ಆ ಮಾರ್ಗದಲ್ಲಿಯೇ ಹೋಗಿ, ಕಾಡಿನ ಮಧ್ಯದಲ್ಲಿ ತಿರುಗಿ, ಅಲ್ಲಿ 'ವಿಶ್ವಾಸ'ಮೀರಿದೆ' ಎಂದು ಹೇಳುತ್ತಾ ಇದ್ದ, ಪಿಶಾಚಿಯಾದ ಮಗನನ್ನು ನೋಡಿ ಮಹಾದು:ಖವೆಂಬ ಸಮುದ್ರದಲ್ಲಿ ಮುಳುಗಿ ಅವನನ್ನು ಕರೆದುಕೊಂಡು ತನ್ನ ಪಟ್ಟಣಕ್ಕೆ ಬಂದನು. ಆಗ ಮಂತ್ರಿಯ ಮೂಲಕ ಮಂತ್ರ ಮಾಡಿ ತಿಳಿದವರನ್ನು ಕರೆಸಿ ಅವರಿಂದ ಚಿಕಿತ್ಸೆ ಮಾಡಿಸಿದನಾದರೂ ಆತನಿಗೆ ಗುಣವಾಗಲಿಲ್ಲ. ಆಗ ಅರಸನು ಮಂತ್ರಿಗೆ "ಓ ಮಂತ್ರಿಯೇ, ಈ ಸಮಯದಲ್ಲಿ ಶರದಾನಂದ ಇದ್ದಿದ್ದರೆ ಆತ ಕ್ಷಣ ಮಾತ್ರದಲ್ಲಿ ಈತನಿಗೆ ಚಿಕಿತ್ಸೆ ಮಾಡುತಿದ್ದ. ಆತ ನನ್ನಿಂದಾಗಿ ವ್ಯರ್ಥವಾಗಿ ತೀರಿಹೋದ. ಮನುಷ್ಯನೊಂದಿಗೆ

ಯಾವ ಕಾರ್ಯ ಮಾಡಿದನೆಂದು ವಿಚಾರಿಸಿ ಶಿಕ್ಷಿಸಬೇಕು, ಹಾಗೆ ಮಾಡದಿದ್ದರೆ ಬಹಳ ಆಪತ್ತು ಬರುತ್ತದೆ, ಪರೀಕ್ಷೆ ಮಾಡದೆ ಶಿಕ್ಷಿಸಬಾರದು, ಚೆನ್ನಾಗಿ ಪರೀಕ್ಷಿಸಬೇಕು, ಇಲ್ಲದಿದ್ದರೆ ಮತ್ತೆ ಸಂತಾಪವಾಗುತ್ತದೆ. ಈ ಸಮಯದಲ್ಲಿ ಪಿಶಾಚಿಯನ್ನು ನಿವಾರಣೆ ಮಾಡುವವನಿಲ್ಲ" ಎಂದನು. ಮಂತ್ರಿಯು "ಆ ಸಮಯ ಹಾಗಿದ್ದಿತು, ಅದರಿಂದಾಗಿ ಆ ಸಮಯದಲ್ಲಿ ಹಾಗೆ ಆಲೋಚನೆಯಾಯಿತು" ಎಂದ.

"ಆತನ ಕರ್ಮಾನುಸಾರದಿಂದ ಆಯಿತು. ಈಗ ಮಗನ ವಿಷಯದಲ್ಲಿ ಮಹಾ ಪ್ರಯತ್ನ ಮಾಡಬೇಕು. ಯಾರಾದರೂ ನನ್ನ ಮಗನ ಚಿಕಿತ್ಸೆ ಮಾಡಿದರೆ ಆತನಿಗೆ ಅರ್ಧ ರಾಜ್ಯ ಕೊಡಲಾಗುತ್ತದೆ ಎಂದು ಡಂಗುರ ಸಾರಿಸಬೇಕು" ಎಂದು ಅರಸ ಹೇಳಿದ. ಮಂತ್ರಿಯು ಚೆನ್ನಾಗಿ ಆಲೋಚಿಸಿ, ಹಾಗೆಯೇ ಮಾಡಿಸಿ ತನ್ನ ಮನೆಗೆ ಬಂದು ಶರದಾನಂದನ ಮುಂದೆ ಆ ಎಲ್ಲಾ ವಿಚಾರವನ್ನು ಹೇಳಿದ. ಎಲ್ಲವನ್ನು ಕೇಳಿ ಶರದಾನಂದನು "ಓ ಮಂತ್ರಿ, 'ನನಗೊಬ್ಬಳು ಕನ್ಯೆ ಇದ್ದಾಳೆ, ಆಕೆಯನ್ನು ನೋಡಬಾರದು, ಆಕೆ ಈತನಿಗೆ ಏನಾದರೂ ಉಪಾಯವನ್ನು ಮಾಡುತ್ತಾಳೆ' ಎಂದು ಅರಸನ ಮುಂದೆ ಹೇಳು" ಎಂದನು.

ಅದನ್ನು ಕೇಳಿ ಮಂತ್ರಿಯು ಅರಸನ ಮುಂದೆ ಹಾಗೆಯೇ ಹೇಳಿದನು. ಅರಸನು ಎಲ್ಲಾ ಸಭೆ ಕೂಡಿಕೊಂಡು ಮಂತ್ರಿಯ ಮನೆಗೆ ಬಂದು ಕುಳಿತುಕೊಂಡನು. ಅಲ್ಲಿ ಅರಸನ ಮಗ 'ವಿಶ್ವಾಸಮೀರಿದೆ' ಎನ್ನುತ್ತಾ ಕುಳಿತಿದ್ದಾನೆ. ಅದನ್ನು ಕೇಳಿ ನೆಲಮಾಳಿಗೆಯಲ್ಲಿದ್ದಾತನು ಒಂದು ಶ್ಲೋಕವನ್ನು ಹೇಳಿದ-ಭಾವಶುದ್ಧವಿರುವಾತನನ್ನು, ಶರಣಾಗತನಾದವನನ್ನು ವಂಚನೆ ಮಾಡಿದಾತನು ಯಾರಾದರೂ ಸಮರ್ಥನೇ? ತೊಡೆಯ ಮೇಲೆ ಮಲಗಿ ನಿದ್ರಿಸಿದಾತನನ್ನು ಕೊಲ್ಲುವುದು ಎಂತಹ ಪೌರುಷ? ಅದನ್ನು ಕೇಳಿ ಅರಸು ಮಗನು ಹೇಳುತ್ತಿದ್ದ ನಾಲ್ಕು ಅಕ್ಷರದ ಮಧ್ಯದಲ್ಲಿ ಒಂದು ಅಕ್ಷರ ಹೋಯಿತು. ಮತ್ತೆ ಎರಡನೇ ಶ್ಲೋಕವನ್ನು ಹೇಳಿದ. ಗಂಗಾನದಿ ಸಾಗರಕ್ಕೆ ಸಂಗಮ ಆದ ಸಮುದ್ರದ ಸೇತುವಿಗೆ ಹೋದರೆ ಬ್ರಹ್ಮಹತ್ಯೆ ಮೊದಲಾದವು ಹೋಗುತ್ತದೆ, ಮಿತ್ರದ್ರೋಹ ಹೋಗುವುದಿಲ್ಲ ಎನ್ನುವ ಶ್ಲೋಕವನ್ನು ಕೇಳಿ ಇನ್ನೊಂದು ಅಕ್ಷರ ಹೋಯಿತು. ಮೂರನೆ ಶ್ಲೋಕವನ್ನು ಹೇಳಿದ, ಮಿತ್ರದ್ರೋಹ ಮಾಡಿದವನು, ಕೃತಘ್ನನಾದವನು, ವಿಶ್ವಾಸದಲ್ಲಿ ಘಾತಕ ಮಾಡಿದವನು ಈ ಮೂವರೂ ಈ ಭೂಮಿಯಿರುವವರೆಗೂ ನರಕಕ್ಕೆ ಹೋಗುತ್ತಾರೆ. ಅದರ ನಂತರ ಅರಸು ಮಗನು ಒಂದು ಅಕ್ಷರವನ್ನು ಹೇಳಿದ. ನಂತರ ನಾಲ್ಕನೆ ಶ್ಲೋಕವನ್ನು ಹೇಳಿದ. 'ಓ ಅರಸನೇ ನಿನ್ನ ಮಗನಿಗೆ ಮಂಗಳವಾಗಬೇಕೆಂದು ಇಚ್ಛಿಸಿದರೆ ಬ್ರಾಹ್ಮಣರಿಗೆ ದಾನ ಕೊಡು, ವನಗಳಿಗೆಲ್ಲಾ ಬ್ರಾಹ್ಮಣನೇ ಗುರು' ಹೀಗೆ ಹೇಳುವಾಗ ಶರದಾನಂದನೂ, ಅರಸುಮಗನೂ ಸ್ವಸ್ತರಾದರು.

ತದ ನಂತರ ತಂದೆಯ ಎದುರಲ್ಲಿ ಆತನು ಭಲ್ಲೂಕದ ಪೂರ್ವ ವೃತ್ತಾಂತವನ್ನು ಹೇಳಿದನು. ಅದನ್ನು ಕೇಳಿ ಅರಸ 'ಗ್ರಾಮದಲ್ಲಿರುವಾಕೆಗೆ ವನಕ್ಕೆ ಹೋದ, ಮರ

ಹುಲಿ ಮನುಷ್ಯರ ಸಂಗತಿ ಹೇಗೆ ತಿಳಿಯಿತು' ಎಂದನು. ನೆಲಮಾಳಿಗೆಯಿಂದ ಶರದಾನಂದನು "ದೇವರು ಬ್ರಾಹ್ಮಣರ ದಯದಿಂದಾಗಿ ನಾಲಿಗೆಯಲ್ಲಿ ಶಾರದೆಯಿದ್ದಾಳೆ. ಅದರಿಂದಾಗಿ, ಭಾನುಮತಿ ಶರೀರದಲ್ಲಿ ಇದ್ದುದನ್ನು ಹೇಳಿದ ಹಾಗೆಯೇ, ನಾನು ತಿಳಿದೆ" ಎಂದು ಹೇಳಿದ. ಈ ಮಾತನ್ನು ಕೇಳಿ ಆಶ್ಚರ್ಯಭರಿತನಾಗಿ ಅರಸ ನೆಲಮಾಳಿಗೆಯ ಬಾಗಿಲು ತೆಗೆಸಿದ, ಶರದಾನಂದ ಕಾಣಸಿಕ್ಕಿದ, ಅರಸ ಮೊದಲಾಗಿ ಇದ್ದವರಿಂದೆಲ್ಲರಿಂದಲೂ ನಮಸ್ಕಾರ ಮಾಡಿಸಿಕೊಂಡ. ಆ ಸಮಯದಲ್ಲಿ ಮಂತ್ರಿಯು ಪೂರ್ವವೃತ್ತಾಂತವನ್ನು ಅರಸನಿಗೆ ಹೇಳಿದ.

"ಓ ಮಂತ್ರಿ, ನಿನ್ನ ಸಂಸರ್ಗದಿಂದಾಗಿ ಅಪಕೀರ್ತಿಯೂ ದುರ್ಗತಿಯೂ ಹೋದವು. ಅದರಿಂದಾಗಿ ಸಜ್ಜನರ ಸಂಗ ಮನುಷ್ಯ ಮಾಡಬೇಕಾಗಿರುವಂತಹುದು, ಅದರಿಂದ ಎರಡು ಪ್ರಯೋಜನವೂ ಆಗುತ್ತದೆ. ಸಜ್ಜನರ ಸಂಗವು ಬಂದ ಆಪತ್ತನ್ನೂ, ಬರುವ ಅಪತ್ತನ್ನೂ ಪರಿಹಾರ ಮಾಡುತ್ತದೆ. ಭಾಗೀರತಿಯ ತೀರ್ಥವನ್ನು ಕುಡಿದರೆ ಬಾಯಾರಿಕೆಯೂ ಹೋಗುತ್ತದೆ, ದುರ್ಗತಿಯೂ ಹೋಗುತ್ತದೆ, ಮತ್ತು ದೊಡ್ಡ ಕಷ್ಟದಿಂದ ನನ್ನ ಮಗನನ್ನು ರಕ್ಷಣೆ ಮಾಡಿದೆ. ಅರಸರು ಸಜ್ಜನರಾಗಿರುವ, ಕುಲವಂತರಾಗಿರುವ, ನಿನಗೆ ಸಮಾನವಾಗಿರುವಂತವರನ್ನು ಸಂಪಾದನೆ ಮಾಡಬೇಕು. ಎಲ್ಲಾ ತಿಳಿದವನನ್ನು ಶ್ಲಾಘನೆ ಮಾಡಬೇಕು" ಹೀಗೆ ಬಹಳ ಸ್ತುತಿಸಿ ವಸ್ತ್ರ ಮೊದಲಾದವುಗಳಿಂದ ಮನ್ನಣೆ ಮಾಡಿ ಅರಸನು ರಾಜ್ಯಾಭಾರ ಮಾಡಿಕೊಂಡು ಇದ್ದನು.

ಈ ಕಥೆಯನ್ನು ಮಂತ್ರಿಯು ಭೋಜರಾಜನಿಗೆ ಹೇಳಿ 'ಓ ಅರಸನೇ ಯಾವ ಅರಸನು ಮಂತ್ರಿಯ ಮಾತನ್ನು ಕೇಳುತ್ತಾನೋ ಆತ ಆಯುಷ್ಯವಿದ್ದವನಾಗಿ ಸುಖವಿದ್ದವನಾಗುತ್ತಾನೆ' ಎಂದನು. ಆಗ ಭೋಜರಾಜನು ಮಂತ್ರಿಯನ್ನು ಸ್ತೋತ್ರ ಮಾಡಿ ವಸ್ತ್ರ ಮೊದಲಾದವುಗಳಿಂದ ಮನ್ನಣೆ ಮಾಡಿ ಆ ಸಿಂಹಾಸನವನ್ನು ನಗರದ ಒಳಗೆ ತಂದಿರಿಸಿದನು. ಹೀಗೆ ನಂದರಾಜನ ಕಥೆ, ಭೋಜರಾಜನಿಗೆ ಸಿಂಹಾಸನ ಸಿಕ್ಕಿದ ಕಥೆ ಸಮಾಪ್ತಿ ಆಯಿತು.

ಮತ್ತೆ ಭೋಜರಾಜನು ಅಲ್ಲಿ ಸಾವಿರ ಕಂಬದ ಮಂಟಪವನ್ನು ಮಾಡಿಸಿ ಉತ್ತಮ ಮುಹೂರ್ತದಲ್ಲಿ ಸಿಂಹಾಸನವನ್ನು ಮಂಟಪದಲ್ಲಿ ಸ್ಥಾಪನೆ ಮಾಡಿದನು. ಅನಂತರ ಚೆನ್ನಾಗಿ ತೀರ್ಥದ ನೀರಲ್ಲಿ ಬ್ರಾಹ್ಮಣರಿಂದ ಮಂತ್ರಾದಿಗಳಿಂದ ಅಭಿಷೇಕ ಮಾಡಿಸಿಕೊಂಡನು. ಸ್ತ್ರೀಯರು ಆರತಿ ಮಾಡಿದರು, ಅರಸರು ಆರಾಧನೆ ಮಾಡಿದರು, ಪಾಟಕರಿಂದ ಸ್ತೋತ್ರ ಮಾಡಿಸಿಕೊಂಡನು. ಚತುರ್ವರ್ಣಗಳನ್ನು ದಾನಮಾನಗಳಿಂದ ಮನ್ನಣೆ ಮಾಡಿ ದೀನರು, ಕುರುಡರು, ಕಿವುಡರು, ಕುಬ್ಜರು ಮೊದಲಾದವರಿಗೆ ದಾನವನ್ನು ನೀಡಿ ಛತ್ರ ಚಾಮರಗಳಿಂದೊಡಗೂಡಿ ಪುತ್ಥಳಿಯ ತಲೆಯ ಮೇಲೆ ಪಾದಕಮಲವನ್ನು ಇರಿಸುವ ಆ ಸಮಯದಲ್ಲಿ ಪುತ್ಥಳಿಯು ಅರಸನನ್ನು ನೋಡಿ "ಓ ಅರಸನೇ, ವಿಕ್ರಮಾರ್ಕನಿಗೆ ಸಮಾನವಾಗಿರುವ ಪರಾಕ್ರಮ, ಔದಾರ್ಯ ಮೊದಲಾದವು ನಿನ್ನಲ್ಲಿ ಇದೆಯೆಂದಾದರೆ ನೀನು ಸಿಂಹಾಸನದಲ್ಲಿ ಕುಳಿತುಕೊ" ಎಂದಿತು. ಅರಸನು "ಓ

ಪುತ್ಥಳಿ, ನೀನು ಹೇಳಿದ ಎಲ್ಲಾ ಔದಾರ್ಯ ಗುಣಗಳಿಂದ ಕಡಿಮೆಯಿಲ್ಲದೆ ನಾನೂ ಕೂಡಾ ಎಲ್ಲರಿಗೂ ಬೇಕಾದುದನ್ನು, ಕಾಲೋಚಿತವಾದುದನ್ನು ನೀಡಿದ್ದೇನೆ" ಎಂದು ಹೇಳಿದನು. ಪುತ್ಥಳಿಯು "ಓ ಅರಸನೇ, ಇದುವೇ ಅಯೋಗ್ಯವಾಗಿರುವಂತಹುದು, ತಾನು ನೀಡಿದ್ದನ್ನು ತನ್ನ ಬಾಯಿಯಲ್ಲಿ ಯಾವಾಗ ಹೇಳುತ್ತಾನೋ, ಯಾರು ತನ್ನ ಗುಣ, ಇತರರ ಅವಗುಣವನ್ನು ಹೇಳುತ್ತಾನೋ ಆತ ಕೇವಲ ದುರ್ಜನನೇ ಸರಿ, ಸಜ್ಜನ ಹಾಗೆ ಹೇಳುವುದಿಲ್ಲ. ಸಜ್ಜನನ ಧನ, ಆಯುಷ್ಯ, ಮನೆಯ ಕ್ಷುದ್ರ, ಮಂತ್ರ, ಮದ್ದು, ಅಂತರಂಗ, ದಾನ, ಮಾನ, ಅವಮಾನ ಈ ಒಂಬತ್ತು ಬಗೆ ಗೋಪ್ಯವಾದುದು. ಅಲ್ಲದೆ ಧನಹಾನಿ, ಮನಸ್ತಾಪ, ಮನೆಯಲ್ಲಿನ ದುಶ್ಚರಿತೆ, ವಂಚನೆ, ಅವಮಾನವನ್ನು ಬುದ್ಧಿವಂತ ಹೇಳಲಾರ. ತನ್ನ ಗುಣ ತಾನು ಹೇಳಬಾರದು, ಇತರರ ನಿಂದೆ ಮಾಡಬಾರದು" ಎಂದಿತು. ಹೀಗೆ ಪುತ್ಥಳಿ ಹೇಳಿದ್ದನ್ನು ಕೇಳಿ ಭೋಜರಾಜ ಆಶ್ಚರ್ಯಭರಿತನಾಗಿ "ಓ ಪುತ್ಥಳಿಯೇ, ನೀನು ಸತ್ಯ ಹೇಳಿದೆ. ಯಾರು ತನ್ನ ಗುಣವನ್ನು ಹೇಳುತ್ತಾನೋ ಆತ ಮೂರ್ಖ. ನಾನು ನನ್ನ ಗುಣವನ್ನು ಹೇಳಿದೆ, ಅದು ಅಯೋಗ್ಯವಾದುದು. ಆ ಸಿಂಹಾಸನದಲ್ಲಿ ಕುಳಿತವನ ಔದಾರ್ಯ ಗುಣಗಳನ್ನು ಹೇಳು" ಎಂದು ಕೇಳಿದ. ಪುತ್ಥಳಿಯು "ಓ ಅರಸನೇ, ಈ ಸಿಂಹಾಸನವು ವಿಕ್ರಮಾರ್ಕನದು, ಯಾಚಕರಿಗೆ ಕೋಟಿ ಸುವರ್ಣವನ್ನು ನೀಡಿದ್ದಾನೆ" ಎಂದಿತು.

[ಅಪೂರ್ಣವಾಗಿದ್ದು ಮುಂದಿನ ಭಾಗ ಲಭ್ಯವಿಲ್ಲ]

ಅನುಬಂಧ–೧

೧. ತುಳು ಪಂಚತಂತ್ರೊ(೧ಲ೪೯)ಡ್ ಉಪ್ಪುನ ಶರದಾನಂದ ಕಥೆ

ಎಂಕಲ್ನ ಸಂಪಾದನೆಡ್ ಸದ್ಯೊಗು ಪ್ರಕಟ ಮಲ್ಪರೆ ಉಪ್ಪು ಬಾಸೆಲ್ ಮಿಶನರಿಳೆ ಸಂಗ್ರಹ ಆದಿತ್ತಿ ೧ಲ೪೯ಡ್ ರಂಗಂಣಾಚಾರ್ಯೆರ್ ಬರೆತಿ 'ತುಳು ಪಂಚತಂತ್ರೊ'ದ ೩೨೭ನೇ ಪುಟೊಡ್ದು ೩೪೨ ಪುಟೊ ಮುಟ್ಟ ಇತ್ತಿ ಕತೆ ಉಂದು. ಈ ಕಥೆಟ್ಟ್ '' ಗುರ್ತ ಇತ್ತಿನಲ್ಪ ಸಂಸ್ಕೃತ ಶ್ಲೋಕೊಲು ಉಂಡು. ಆಂಡ ಕೆಲವು ಕಡೆಟ್, '**' ಗುರ್ತ ಇತ್ತಿನಲ್ಪ, ಶ್ಲೋಕೊ ಪಂಡ್ದ್ ಬರೆತ್ತ್‌ಂಡಲಾ ಅಲ್ಪ ಶ್ಲೋಕೊ ಇಜ್ಜಿ. ಅತ್ತಾಂದೆ ಇಂದೆಟ್ ಕಥೆ ಮಾತ್ರ ತೆರಿಯೊಡಾಯಿನೆಡ್ದ್ ಮುಲ್ಪ ಕಥೆತೊಟ್ಟುಗು ಶ್ಲೋಕೊಳೆನ್ ಸೇರಾದ್‌ಜ –ಸಂ.*

* ಸ್ವಸ್ತಿಮತೀನ್ಪಿ ಪಟ್ಟಣೊಡು । ನಂದ ಮಹಾಪಾಲಕೇನ್ಪಿ ರಾಯೆ । ಭಾನುಮತೀನ್ಪಿ ಬುಡೆದಿ ಜಯಪಾಲೇನ್ಪಿ ಮಗೆ । ವಾಹಕೇನ್ಪಿ ಪ್ರಧಾನಿ ಶರದಾನಂದೇನ್ಪಿ ಪೂರೋಹಿತೆ ಸಹ ಸುಖೊಡು ರಾಜ್ಯೊನಿ ಅಳೊಂಡುದು ಉಪ್ಪನಾಗ । ಸಮಸ್ತ ಪಾರಪತ್ಯೊನಿ ಪ್ರಧಾನಿಗ್ ಕೊರುದು । ತಾನ್ ಮಹಾ ಕಾಮುಖೆ ಆತ್ತ್ । ತನ ಬುಡೆದಿನಿ ಬುಡುದು ಪೋವರ ಕೂಡಂಥೆ ಆಳೆಡಪ್ಪ ಅನೇಕ ಕ್ರೀಡೆದ ಸಲುಖ್ಯೊದಾವ । ಕೆಲಲು ಕಾಲೊ ಉಪ್ಪನಾಗ । ಸುತ್ತದ ಅರಸುಳು ಮಾತ ಕೂಡುದು ಯಿಾ ನಂದರಾಯೆ । ಮಹಾಕ್ರೀಡೆಡೇ ಉಳ್ಳೆ । ಪ್ರಧಾನಿ ರಾಜ್ಯೊನಿ ತೂಪೆ ನಮೊ ಆಯ ಪಟ್ಟಣೊಗು ಮುತ್ತಿಗೆ ಪಾಡ್‌ದ್ । ದೆತ್ತೊಣುಗೋಂದ್‌ದ್ ಯೋಚನೆ ಮಳ್ಪಲ್ಪನಾಗ । ಯಿಾ ಪಾತೆರೊನಿ ವಾಹಕೇನ್ಪಿ ಪ್ರಧಾನಿ ಕೇಂಡ್‌ದ್ । ಯಿಾ ರಾಯಾ ಸಮಿಾಪೊಗು ಬತ್ತ್‌ದ್ । ಯಿಂಚ ಪಂಡೆ । ಅಂದೋ ಅರಸೇ ಪೊಣುಜಾವೆ । ವ್ಯಸನೊಡು ಕೂಡಂತಿ ಮನುಷ್ಯೆರ್ಕುಳೆಗ್ । ಅನಂತ ಕಾರ್ಯೊಳು ಉಪ್ಪುವೊ । ಅಲು ದಾನೆಂದ್‌ಂಡಾ * ಯಿಂಚ ನೀತಿ ಯಿತ್ತ್‌ದ್ । ಅತಿ ಪಣ್‌ಜಾವೆ ವ್ಯಸನೊಡು । ಉಪ್ಪರಾಂದ್‌ಂದ್‌ದ್ ಪಂಣಾಗ । ಆ ರಾಯೆ ಪಂಡೆ। ಅಂಚಿತ್ತೀ ಸ್ತ್ರೀ ಭೋಗೊ ಯಿತ್ತೆನೇ ಸಲುಖ್ಯೊ । ಅಲು ಆವಂತೆ ರಾಜ್ಯೊಡು ಪ್ರಯೋಜನ ದಾನೆಂದ್‌ದ್ ಯಿಂಚ ಪಂಡೆ * ತಾನ್ ನಿತ್ಯೊಡು ಅನುಭವಿತಿ ಪಣ್‌ಜಾಲು । ಆಂಡಲಾ ದಿನೊ ದಿನೊ ಪೊಸತ್ತಾದ್ ತೋಜೇಪು। ತೆಲಿಪಂತ್ತೆ ಯಿತ್ತ್‌ಂಡಲ್ಲಾ ಮುಖೊದ ಕಾಂತಿಡೆ ನಿಹಿಲಕೊನೇ ತೋಜು । ಅಹಂಕಾರೊ ಯಿಜ್ಜಿಡಲಾ ಅಹಂಕಾರೊದ ಲೆಕ್ಕೊ

ತೋಜೇಪು । ಪಾತೆರಂತೆ ಯಿತ್ತ್ಂಡಲಾ ಕಡೆಗಂಣ್ಡ್ ತೂಪಿ ಬೋಂಟೆನೇ । ಪಾತೆರ್ಪಾಲು । ಯಿಂಚೀ ಪಣ್‌ಜಾಲುನಿ ಬುಡುದು । ಉಪ್ಪೊಲ್ಯಾಂದ್‌ದ್ ಬೊಕ್ಕ ಯಿಂಚ ಪಂಡೆ ** ಕಪ್ಪುನೆದಲೆ ಪುಷ್ಪೊದಂದೊ ಕಂಣ್। ಯಿತ್ತಿ ಆಣ್‌ಜಾವೆಗ್ ಯೆಮಲೋಕೊನೇ ಯಡ್ಡೆಂದ್‌ದ್ ಪಂಣಾಗ ಪ್ರಧಾನಿ ಮಹಾ ಚಿಂತೆ ಯಿತ್ತಿನಾಯೆ ಆದ್ ಯಿಂಚ ಪಂಡೆ। ಯಾನಾದ್ ಪಂಡಿನಾಯೆ ಅತ್ತ್। ಆ ಶಾರದಾಂಬೆನ್ಪಿ ಉಪಾದ್ಯೇರ್। ಶಾಸ್ತ್ರಯುಕ್ತಿನಿ ಪಿಂದ್‌ದ್ ಪಂಡೆ ಹೊರ್ತಾಂದೆ ಬೊಕ್ಕೊಂಜಿ ಅತ್ತ್ । ಸ್ವಾಮಿ ವಿಚಾರಿತೊಣೊಡು । ಅಲು ಯೆಂಚಂದ್‌ಂಡಾ ಮಂದರ ಪುರೋನ್ಪಿ ಪಟ್ಟಣೊಡು। ಮಂದಾರವರ್ಮೆನ್ಪಿ ವ್ಯಾಪಾರಗಾರೆ। ಮಂದಾರವತೀನ್ಪಿ ಬುಡೆದಿ ಸಹಿತಾದ್। ಕೆಲಲು ಕಾಲೊ ಸುಖೊಡು ಉಪ್ಪನಾಗ । ವಂಜಿ ದಿನೊ ಬಿರಾಣೆ ವೊಂಜಿ ಗ್ರಂಥೊನಿ ಕೊಂಡತ್ತ್‌ದ್। ಕ್ರಯೊಗು ದೆತೊಣುನಾಕುಳು ಉಂಡೋಂದುದು। ಕೇಣ್‌ನಾಗ ಯಿಾ ಹರದೆ। ಆ ಗ್ರಂಥೊನಿ ದೆತ್ತೊಂಡುದು। ಆ ಬಿರಣಗ್ ದ್ರವ್ಯೊನಿ ಕೊರುದು ಕಡಪುಡುನಾಗ। ಐನಿ ತನ ಜೆಪ್ಪುವಿ ಕೋಣೆ ಯಿತ್ತಿ ಪಣ್‌ಜಾವೆ ಪುಂಡುಡು ತಿಕ್‌ದ್ ಉಪ್ಪನಾಗ । ತನ ಪಣ್‌ಜಾವೆಗ್ ವೊಂಜಿ ರಡ್ಡ್ ತಿಂಗೊಳುದ ಗರ್ಭದಾಳ್ ಅವೊಂಡುದುದು ಉಪ್ಪನಾಗ। ಆ ಹರದೆ ಯಿಾ ಸ್ತಳೊಟು ದಾಲ ವ್ಯಾಪಾರೊ ಯಿಜ್ಜಿ। ಸಮುದ್ರೊಡು ದೂರ ಪೋದು। ಬಹಾಳ ಪಣಾಲುನಿ ಸಂಪಾದಿತ್‌ದ್ ಕೊಂಡುದು ಬರೊಡೂಂದ್‌ದ್ । ಮನಸ್ಸ್‌ಡ್ ಆಲೋಚನೆ ಮಲ್ತೊಂಡುದು। ತನ ಬುಡೆದಿಡ ಪಂಡ್‌ದ್ ತಾನ್ ಪಿದಾಡ್‌ದ್ ಪೋದು। ದ್ವೀಪಾಂತರೊಗು ಪೋದು। ಮಾತ ಜೇನ್‌ಸ್ಸ್ ಕ್ರಯೊ ಮಳ್ತ್ ದೆತ್ತೊಂಡುದು। ಅಲ್ಲ್ ವಂತೆ ಪಿದಾಡ್ಯರ ತಡಾಲು ಆನಗ । ಮುಲ್ಲು ಊರುಡು ಉಂಬ್ಯಾ ಬುಡೆದಿಗ್ । ದಿನೊ ದಿಂಜಿದ್ । ಆಣ್ ಬಾಲೆ ಪೆದ್‌ಪುಂಣೆ । ಆ ಮಗೆ । ಯಿಂಚನೇ ಕೆಲಲು ವರ್ಸೊ। ದಾಂಟ್‌ನಗ। ಮಗೆ ಪ್ರಾಯೊದಾಯೆ ಆಯೆ। ತನ ಸ್ವತಂತ್ರೊಡು। ಆ ಮಗೆ ವ್ಯಹಾರೊ ಉದ್ಯೋಗೊ ಮಲ್ತೊಂಡುದು ಉಪ್ಪನಾಗ । ಯಿಾ ವ್ಯಾಪಾರೊಗು । ಪೋಯಿ ಅಂಮೆ ಸಮಸ್ತ ವ್ಯಾಪಾರೊನಿ ಮಳ್ತೊಂಡುದು । ಬಹಳ ಪಣಾಲುನಿ ಸಂಪಾದನೆ ಮಳ್ತೊಂಡುದು। ಮಹಾ ಸಂತೋಸೊತ್ತಾವ। ಕೆಲಲು ದೂರೊ ಬತ್ತ್‌ದ್। ಪೊಣುಜಾವೆನಿ ನಂಬ್ಯರಾಂದ್। ಯನ ಬುಡೆದಿ ದಾನಿ ಭಾವೊಡು ಉಲ್ಲೋಳೋ। ತೂವೊಡೂಂದುದು । ತಾನ್ ವೇಷ ಪಗರ್ತೊಂಡುದು ಭೈರಾಗಿ ಲಕ್ಕೊ ಕುಂಟು ತುತ್ತಾಂತೆ। ಮಹಾ ಕಬಟವೇಸೊಡು ತನ ಯಿಲ್ಲಾಗ್ ಬತ್ತ್‌ದ್। ಬುಡಾರೊಗು ಜಾಗೆ ಬೋಡೂಂದುದು ನಾಡ್‌ನಾಗ । ಆಳ್ ಉಂಬ್ಯೆ ವೊಳ್ಳೊ ಮಹಾ ಪುರುಷೆನೊ । ಯೇರ್‌ಂದ್‌ಲಾ ಪಿನಂತ್ತೆ। ಉಂಬ್ಯಗ್ ಉಪಚಾರ ಮಂನಣೆ ಮಳ್ತ್‌ದ್ । ಮಹಾ ಗುಣೊಟು। ಉಣಾಸ್ ಮಳ್ಪುದು। ನಿಕುಳು ದಾಲ ಬಲಿಮೆ ಶಕುನೊ ಪಿಂಬಾರಾಂದ್‌ದ್। ಕೇಣ್‌ನಾಗ। ಯಾನ್ ಪಿರಾಲಾ ಆಯಿನ್ಯನಿ ದುಂಬು ಆಪಿನ್ಯನಿ ಮಾತ ಪಿಂಬೇಂದ್‌ದ್ ಆಯೆ ಪಣ್‌ನಾಗ। ಮೋಳು ಯನ ಕಂಡಣೆ ಪರದೇಶೋಗು ಪೋದು। ಬಾಲೊ ದಿನೊ ಆಂಡ್ ನಣಲಾ ಬತ್ತಿಜ್ಜಿ ದಾಯೆಗಂದ್‌ದ್ ಕೇಣ್‌ನಾಗ । ಉಂಬೆ ಆಯ

ಪೂರ್ವೊದ ಕಥೆನಿ । ಮೋಲೆ ಮನಸ್‍ಗ್ ದಂಬಡಿಕೆ ದ್ರುಷ್ಟಾಂತೊ ಸಮೊ ಆದ್ ಪಂಡ್‍ದ್ । ಮೂಜಿ ದಿನೊತ ಉಳಾಯಿ ಯಿನ ಕಂಡಣೆ । ಬರ್ವೆಂದ್‍ದ್ ಪಣ್‍ಪುಂಡೆ। ಆಳ್ ಬಹಳೊ ಸಂತೋಸೊ ಮಳ್ತೊಂಡುದು ಯಿನಿ ಯಿರ್ಲ್ ಯೆಂಕುಳೆ ಯಿಲಾಡ್ ಉಪ್ಪುಲೇಂದ್‍ದ್ ಕುಲ್ಲೋದಿವೊಂಣಾಗ । ಮೋಳು ಉಂಡುದು ತನ ಮಗೆ ಸಹ ಮಂಚೊದ ಮಿತ್ತ್ ಜೆತ್ತೊಂದು ಉಪ್ಪನಾಗ । ಉಂಬ್ಯೆ ತೂದು । ತನ ಬುಡೆದಿ ಪತಿಉ್ರತಾಧರ್ಮ ತೆಟ್‍ಂಡ್‍ಂದ್‍ದ್ ಕತ್ತಿ ದೆತ್ತೊಂಡುದು ಆ ಕತ್ತಿಡ್ ಆಳೆನಿ ಕಡ್‍ಪೊಡೂಂದ್‍ದ್ ಪ್ರಯತ್ನೊ ಮಳ್ಪನಾಗ । ಆಳ್ಳ್ ವೊಂಜಿ ಚೀಟ್‍ನಿ ಬರೆತ್ತ್ ದೀತ್‍ಂಡ್ ಆ ಚೀಟನಿ ವೊದುತ್ತು ತೂಯೆ । ಅಉ ದಾನೆಂದ್‍ಂಡಾ । **ಯಿಂಚ ನೀತಿ ಯಿತ್ತ್‍ದ್ ಆಲೋಚನೆ ಮಳ್ತ್‍ದ್ । ಆ ಆಯುಧೊನಿ ಆಳ್ಳೇ ದೀದ್ ಆ ಯಿರ್ಲ್ ದಾಂಟುಣನೇ ಮನದಾನಿ ಪೊದ್ವೇರ್ ಯಿಷ್ಟೇರ್ । ನಿರೆತಾಕುಳೆನಿ ಕೇಣನಾಗ ಆಕುಳು ತನ ಗ್ರಹಕ್ರುತ್ಯೊದ ಕಥೆನಿ ಮಾತ ಪಂಣಾಗ ವೊಪ್ಪ ಜೆತ್ತೊಂಡುದು ಯಿತ್ತಿನಾಯೆ । ಆಳೆ ಮಗೆಂದ್‍ದ್ ಪಿಂದ್‍ದ್ । ಆಹಾ ಮಹಾ ಮೋಸ ಬತ್ತ್‍ದ್ ಪೋತೂಂದುದು। ಮಹಾ ಆಶ್ಚರ್ಯ ಬುಡುದು ಆಯೆ ತನ ವ್ಯಾಪಾರೊ ತನ ಮಂದೆ ಯಿತ್ತಿನಾಡೆಗ್ ಪೋದು । ಐನಿ ಮಾತ ಸಾಗಾವೊಂಡುದು ತನ ಯಿಲ್ಲಾಗ್ ಬತ್ತ್‍ದ್ । ಗ್ರಂತೊ ಶಾಸ್ತ್ರೊ ಪ್ರಕಾರೊ ಬಿರಾಣಾಗ್ ಮೂಜೇಟ್ ವೊಂಜಿ ಪಾಲ್ ಪಣಾಉನಿ ಕೊರುದು ತನ ಪೊದ್ವೇರ್ ಯಿಷ್ಟೇರೆ ಕೃಟ್ ಮಾತ । ತನ ಕಥೆನಿ ಮಾತ ಪಂಡ್‍ದ್ । ಯಿಾ ಬುಡೆದಿ ಬಾಲೆಗುಳೆನಿ ಕುಡೊಂಡುದು ಸೌಖ್ಯೊಡು ಯಿತ್ತೆ । ಆ ಕಾರಣೊತ್ತಾವ ಅವಿವೇಕ್ಯುಳೇ ಕೃಟ್ ವೊಂಜಿ ಕಾರ್ಯೊಳೆನಿಲಾ ಮಳ್ಪೆರೆ ಆಂದ್‍ಂದ್‍ದ್ ಪಣ್‍ನಾಗ। ಆ ಪಾತೆರೊನಿ ಕೇಣಂತೆ । ಶರದಾನಂದೆಗ್ ಸೀಕ್ಷೆ ಮಳ್ಪೊಡೂಂದುದು ಪಣನಾಗ । ಧನಿಕ್ ಆವಂದಿ ಮನುಷ್ಯೆ । ದಾಯೇಗ್‍ಂದ್‍ದ್ ಆ ಪುರೋಹಿತೊನಿ । ರಟ್ಟೆ ಕಟ್ಟಾದ್ ಬಹಳೊ ದೂರೊ ಕೊಂಡೋದು । ಅಲ್ಲ್ ವರಿ ಕಲ್ಲಾನಿ ಕಡ್‍ತ್‍ದ್ । ಆ ಶರದಾನಂದೆನ್ನಿನಾಯನಿ । ಯೇರೆಗ್‍ಲಾ ತೆರಿಯಂತಿಲೆಕ್ಕೊ ಲೆತ್ತೊಂಡುದು ಬತ್ತ್‍ದ್ ನಿಲಮಾಲ್ಯಡ್ ದೀದ್ । ಆ ಅರಸು ಕೃತಾಳ್ ಬತ್ತ್‍ದ್ । ಆಯಾನಿ ತರೆ ಕಡ್‍ತೋಂದುದು ಪಂಡ್‍ದ್ । ಕೆಲಉ ದಿವಸೊ ಸುಖೊಡು ಯಿಪ್ಪನಾಗ । ಆ ವಿಜಯಪಾಲೆನ್ನಿ ಅರಸು। ವೊಂಜಿ ದಿನೊ ತನ ಕುದುರೆ ಮಂದೆನಿ ದೆತ್ತೊಂಡುದು ಬೋಂಟೆಗ್ ಪೋನಾಗ । ಬಹಳೊ ಅಪಶಕುನೊ ಆದ್ । ಮಂದೆ ಮಾತ ಅರಸು ಪೋವನಾಗ ಅಪಶಕುನೊ ಆಪುಂಡೂಂದುದು ಪಂಣಾಗ । ತೆರಿಯನಾಕುಳು ಅರಸೆ । ಯಿಾ ಯಿಂಚ ಅಪಶಕುನೊ ಆನಗ ಪೋವರಾಂದ್‍ಂದ್‍ದ್ ಪಣನಾಗ । ಅರಸು ಮೂರ್ಖತನೊಡು ಐತ್ತ್ ದಾನೆ ಆಪುಂಡುಂದುದು ಆಕುಳೆ ಪಾತೆರೊನಿ ಕೇಣಂತೆ ದುಂಬು ಪೋವನಾಗ * ಯಿಂಚ ನೀತಿ ಯಿತ್ತ್‍ದ್ ಪಂಡಿ ಪಾತೆರೊನಿ ಕೇಣಂತೆ । ಪೋದು ಅನೇಕ ಮ್ರುಗೊಂಕುಳೆನಿ ಕೆರ್‍ದ್ ಬೋಂಟೆ ದೇರನಾಗ । ವೊಂಜಿ ಮಲ್ಲ ಪಂಜಿ ಯೆದುರುಡು ಸುಳಿಪುನ್ಯನಿ। ತೂದು ಐನಿ ಕೆರ್ಪೆಂದ್‍ದ್ ತಾನ್ ಯೆಡ್ಡೆ ಕುದುರೆಟ್ ಕುದೊಂಡುದು । ಆ ಪಂಜಿನಿ

ಗಿಡೆತ್ತೊಂಡುದು ಪೋವನಾಗ। ಆ ಪಂಜಿ ತ್ತೋಜಂತೆ ಬಹು ದೂರ ಪೋದು। ವೊಂಜಿ ಕಾಡ್‌ಡ್ ಪೋದು ಅರಸು। ಮಹಾ ದಣಿದ್ ಅಳ್ಳ್ ವೊಂಜಿ ಕೆರೆಟ್ ನೀರ್‌ನಿ ಪರ್‌ದ್ ಕುದುರೆಗ್‌ಲಾ ಪರ್‌ಪೋದು। ಪಂತಿನಿ ಕ್ಯೊತ್। ಆ ಕುದುರೆಗ್ ಪಾಡ್‌ದ್ ತಾನ್ ಬಾಳೊ ಬಳೆಲ್‌ದ್ ವೊಂಜಿ ಮರತ ಅಡಿಟ್ ಜೆಪ್ಪನಾಗ ಅಳ್ಳ್ ವೊಂಜಿ ಪಿಲಿ ಯೇಳ್ ದಿನೊ ಉಪವಾಸೊ ಯಿತ್ತ್‌ದ್। ವೊಂಜಿ ಕರಡಿನಿ ಗಿಡೆತೊಂಡುದು ಬಂನಾಗ। ಅಲು ಪೋಡಿತ್‌ದ್ ಯಿಾ ಮರಕ್ ಮಿತ್ತ್ ಪೋನಾಗ ಆ ಮರತ ಕೃತಾಳ್। ಯಿಾ ಪಿಲಿಲ್ಲಾ ಬಂನಾಗ। ಯಿಾ ರಾಯೆ ಮಹಾ ಪೋಡಿಗೆತ್ತಾವ। ಮರಕ್ ಮಿತ್ತ್ ಪೋವನಾಗ। ಉಂಬ್ಯೆ ಆ ಮರಟ್ ಕರಡಿನಿ ತೂದು। ಉಂಬ್ಯೆ ಮಹಾ ಪೋಡಿತ್ತ್ ಉಪ್ಪನಾಗ। ಯಿಾ ಕುದುರೆ ಪೋಡಿತ್‌ದ್ ಬಲ್ಲ್ ಕಡಿತ್ತೊಂಡ್‌ದ್। ಪಾರ್‌ಂಡ್ ಯಿಾ ರಾಯಗ್। ಮರಟ್ ಕರಡಿ ತಿಳ್ತ್ ಪಿಲಿ। ಯಿಂದೆತ್ತಾವ ಆಯೆ ಮಹಾ ಚಿಂತೆ ಮಳ್ಪನಾಗ। ಆ ಕರಡಿ ತೂದು ಅಂದೋ ಅರಸು ಮಗ। ಯಿಾ ದಾಯೆಗ್ ಪೋಡಿಪುವಾ। ಯಿನನ್ ಪುಲ್ಯಾಪುಂಣೆ ಯಿಾ ಮರತ್ತ್ ತಿಳ್ತ್ ಕಡಪುಡುವೆ। ನಿಕ್ಕ್ ದಾಯಿದ ಪೋಡಿಲಾ ಬೋಡ್ಚಿಂದ್‌ದ್ ನಂಬಿಕೆ ಕೊರುದು। ಯಿಾ ಅರಸುನಿ ತನಟ್ಟೊಟ್ಟುಗು। ಕುಳ್ಳಾದೀವೊಂಡುದು ಉಪ್ಪನಾಗ। ಉಂಬೆ ನಿದ್ರೆಡ್ ಕಂಣ್ ಕೂರನಾಗ। ಆ ಕರಡಿ ತೂದು ಅಂದೊ ಅರಸು ಮಗ ಯಿಾ ಮೂಲು ಜೆಪ್ಲಾಂದ್‌ದ್ ತನ ತೊಡೆತ ಮಿತ್ತ್ ಅರಸು ಮಗನಿ ಜೆಪ್ಪಾದ್। ಕುಲ್ಲುಂನೆ ಆಯೆ ಮಹಾ ನಿದ್ರೆಡ್ ಉಪ್ಪುನಾಗ। ಯಿಾ ಪಿಲಿ ಪಂಡ್‌ಂಡ್। ಅಂದೋ ಕರಡ್ಯೆ ಯಿಾ ಆ ನೆದ್ರೆಡ್ವಿನಾಯನ್ ತಿಳ್ತ್ ನೂಕ್ಯಡಾ। ಯಾನ್ ಮಹಾ ಬಡಾಉಡು ಉಳ್ಳೆ। ಆಯನ್ ತ್ತಿಂದ್‌ದ್ ಯಾನ್ ಪೋಪೇಂದ್‌ದ್ ಪಣ್‌ನಾಗ। ಕರಡಿ ದಂಬಡ್ಯಂತೆ ಉಪ್ಪನಾಗ। ಪಿಲಿ ಬಹಳೊ ಪಂಡ್‌ಂಡ್। ಆಯನಿ ತ್ತಿಂನ್ಯರ ಯಿಾ ಕೊರ್ಯ್ಡಾ। ನಮೊ ದುಂಬುದ ಲೆಕ್ಕೊನೇ ಸ್ನೇಹೊಡುಪ್ಪುಗೊಂದುದು ಪಂಣಾಗ। ಆ ಕರಡಿ ವಿವೇಕೊದ ಪಾತೆರೊನಿ ಪಂಡ್‌ಂಡ್। ಯಾನ್ ವಿಶ್ವಾಸೊಡು ಘಾತುಕ ಮಳ್ಪಾಯೆಂದ್‌ದ್ ಪಣ್‌ನಾಗ। ಆ ಸಮಯೊಡು ಆ ಅರಸು ಮಗಕ್ ಯೆಚ್ಚರಿಕೆ ಆಂಡ್। ಆಪಗ ಆಯಡ ಕರಡಿ ಪಂಡ್‌ಂಡ್। ಅಂದೋ ಅರಸು ಮಗಾ ಯಿಾ ಯಿಾತ್ ಪೊಲ್ತು ನೆದ್ರೆಡ್ಯಾ। ನನ ಯಾನ್ ವಂತೆ ನೆದ್ರೆಡ್‌ಪೇಂದ್‌ದ್ ಪಂಡ್‌ದ್। ಮಲ್ಲ ಮರತ ಗೆಲ್ಲುಳೆಡ್। ಕೈಕಾರ್‌ಡ್ ಕೂಟೊಂಡುದು। ಕಬಟೊಡು ಕರಡಿ ನಿದ್ರೆ ಬತ್ತಿನಂದೊ ಜೆಪ್ಪನಾಗ। ಅರಸು ಮಗಟ ಪಿಲಿ ಪಂಡ್‌ಂಡ್। ಅಂದೋ ಅರಸು ಮಗ ಮಲ್ಲ ಕೂಳಿ ಉಗುರು ಯಿತ್ತಿನಾಕುಳೆನಿ ನಂಬ್ಯರಾಂದ್। ಆ ಕರಡಿ ನಿದ್ರೆ ಯೆಚ್ಚರಿಕೆ ಆದ್ ಯಿನನಿ ತಿನ್‌ಪುಂಡು ಐತ್ತಾವ। ಯಿಾ ಕರಡಿನಿ ನೂಕುಂಡಾ ಯಾನ್ ತಿಂದ್‌ದ್। ಯನ ಗೂಹೆಗ್ ಪೋವೆ। ಪುಲ್ಯಾನಗ ಲಕ್ಕ್‌ದ್ ಯಿಾ ಊರುಗು ಪೋವೊಳೀಂದ್‌ದ್ ಪಂಣಾಗ। ಅರಸು ಮಗೆ ಆ ಪಾತೆರೊ ಕೇಂಡ್‌ದ್। ಅವಿವೇಕೊತನೊತ್ತಾವ ಆ ಕರಡಿನಿ ತಿಳ್ತ್ ನೂಕನಾಗ ಕರಡಿಗ್ ಯೆಚ್ಚರಿಕೆ ಆದ್। ಮರತ ಗೆಲ್ಲುಳೆನಿ ಪತ್ತೊಂಡುದು। ಅಂದೋ ಅರಸು ಮಗಾ। ಧಾನೆ ಮಳ್ತ್‌ನಡಲಾ ಯಿನ ಅವಿವೇಕೊನಿ ಬುಡಂತೆ ಪೋಯಾದ್। ಯಿಂಚಿತ್ತಿ ಸ್ನೇಹಿತಗ್ ದ್ರೋಹೊ

ಮಲ್ಪೊಲ್ಯೊ। ಯಾನ್ ಪಂಡಿ ಪಾತೆರೊಗು ತತ್ತಿಜ್ಜಿ। ಯಿ ಯಿಂಚ ಮಳ್ತನಾಂದ್‌ದ್ ಕರಡಿ ಮಹಾಕೋಪ ಮಳ್ಪನಾಗ। ಆ ಸಮಯೊಡು ಪೊಲ್ತು ಉದಿತ್ತ್ಂಡ್। ಪಿಲಿ ತನ ಆಹಾರೊಗು ಪೋಂಡೂ ಆ ಕರಡಿ ಯಿ ಅರಸು ಮಗೆ ಕೂಡೊಂಡುದು। ಜಗಳೊ ಮಳ್ತೊಂಡುದು। ಆ ಕರಡಿ ಮರತ್ತ್ ಬೂರನಾಗ ಪಂಡ್‌ಂಡ್। ಯಿ ಸ್ನೇಹೊಡು ಘಾತಕ ಮಳ್ತಿನ್ಯಕ್ ಯನ ಮನಸ್ಸ್‌ಡ್ ಲೋಕೊದ ಪ್ರಾಣಿಳೆಗ್। ಸಸಿಮಿರಾಂದ್‌ದ್ ನಾಲ್ ಅಕ್ಷೊರೊಳೆನಿ। ಬಾಯಿಡ್ ಪಂಡೊಂಡುದು ಮರ್ಲೆ ಆದ್ ಉಪ್ಪಲಾಂದ್‌ದ್। ಶಾಪ ಕೊರ್ಪುಣಂಡೆ। ಅರಸು ಮಗೆ ಗಾಬ್ರಿ ಆದ್। ಆ ಕರಡಿ ಕೈಟ್। ಯೆಂಕ್ ಯಾಪೊಗು ಯಿ ಶಾಪ ಪರಿಹಾರೋಂದುದು ಕೇಣೊಂಣಾಗ। ನಾಲ್ ಅಕ್ಷರೊಗು ಉತ್ತರೊನಿ ಪಿಂದ್‌ದ್। ಯಿ ಕಥೆನಿ ಯೇರ್ ಪಿಂದ್‌ದ್ ಯೇನಿಗ್ ಪಣ್‌ಪೇರ್। ಆನಿಗ್ ನಿಕ್ಕ್। ಶಾಪೊ ಪರಿಹಾರೋಂದುದು ಪಂಡ್‌ದ್। ಆ ಕರಡಿ ತನ ಸ್ತಳೊಕು ಪೋಪುಂಣೆ। ಯಿ ಅರಸು ಮಗೆ। ಸಸಿಮಿರಾಂದ್‌ದ್। ಮರ್ಲೆ ಆದ್ ಪಂಡೊಂಡುದು ತಿರ್‌ಂಗ್‌ನಾಗ। ಆ ಮನದಾನಿ ಜನ ಪತ್‌ದ್ ತಾನ್ ಕೂಡಾ ಪಾಡ್‌ದ್ ಮಗನಿ ನಾಡ್‌ದ್ ಪಟ್ಟಣೊಗು ಲೆಸೊಂಡು ಬತ್ತ್‌ದ್ ಅರಸು ಕುದೊಂಡುದು ಮಗನಿ ತೂದು ಮಹಾ ದುಖೊ ಬುಡುದು। ಮಂತ್ರಿನಿ ಲೆತ್ತ್‌ದ್ ಯಿಂದೆ ವಿಚಾರೊನಿ ಪಿಂದಿನಾಕುಳೂ ಪಂಣೇಂದ್‌ದ್। ವಿಚಾರಿಪುಲಾಂದ್‌ದ್ ಮಂತ್ರಿಡ ಪಣ್‌ಪುಂಣೆ ಆಯೆ ತನ ಯಿಲ್ಲಾಗ್ಗ್ ಬತ್ತ್‌ದ್ ಶರದಾನಂದಗ್। ಯಿ ಕಥೆನಿ ಪಣನಾಗ। ಆ ಶರದಾನಂದೆ ಉಂದೆನಿ ಮಾತ ಕೇಂಡ್‌ದ್। ಯಿಂದೆಟ್ ಕಾರ್ಯೊ ಉಪ್ಪು। ಯೆನ ಮಗಳೆ ಕೈಟ್ ಕೇಣೋಡೂಂದುದು। ಆಳೆಡ ಕೇಣನಾಗ। ಆಳ್ ಯಾನ್ ಉಂದೆನಿ ಬುಡುಪಾದ್ ಕೊರ್ಪೆಂದ್‌ದ್ ಪಣ್ಣಾಗ। ಯಿ ಮಂತ್ರಿ ಮಹಾ ಸಂತೋಸೊ ಮಳ್ತೊಂಡುದು। ಅರಸು ಕೈತಾಳ್ ಬತ್ತ್‌ದ್ ಸ್ವಾಮಿ ವಿಚಾರಿಪನಾಗ। ಆ ಶರದಾನಂದ ಮಗಾಳ್ ಯಿತ್ತಾಳ್। ಆಳ್ ಉಂದೆನಿ ಬುಡುಪಾದ್ ಕೊರುವೇಂದ್‌ದ್ ಪಂಡೋಳುಂದ್‌ದ್ ಪಣ್‌ನಾಗ ಅರಸು ಕೆಂಡ್‌ದ್। ಸಂತೋಸೊ ಮಳ್ತೊಂಡುದು। ಅಲೆನಿ ಲೆಪುಡುಲಾಂದ್‌ದ್। ಪ್ರಧಾನಿಡ ಪಂಡ್‌ದ್। ಆಯೆ ಪಲ್ಲೆಂಕಿನಿ ಕಡಪುಡುದು। ಐಟ್ ಆಳೆನಿ ಕುಳ್ಳಾದೀದ್। ಪಲ್ಲಂಗೊನಿ ಮುಚ್ಚಿದ್। ಲೆತ್ತೊಂಡುದ್ ಬತ್ತ್‌ದ್। ಚಾವಡಿಡ್ ತೆರೆ ಮದೆಟ್ ಕುಳ್ಳಾದೀನಾಗ। ಯಿ ಮಂತ್ರಿ ಅರಸು ಕೈತಾಳ್ ಬತ್ತ್‌ದ್। ಉಂದೆನಿ ಕೇಂಣೇಂದ್‌ದ್ ಪಂಣಾಗ। ಆ ರಾಯೆ ಬತ್ತ್‌ದ್ ಅಂಮ್ಮಾ। ಯೆನ ಮಗೆ ದಾನೆತ್ತಾವ ಮರುಳಾದ್ ಉಳ್ಳೇಂದ್‌ದ್ ಕೇಣ್‌ನಾಗ ಪಂಡೊಳು। ಯಿ ಮಗೆ ಪಲಿಪುನಾಯೆ ಅತ್ತ್। ನಾಲ್ ಅಕ್ಷರೊಗು ಉತ್ತರ ಕೊರ್ವೆಂದ್‌ದ್* ಅಂದೋ ರಾಜಪುತ್ರಾ ಯಿ ಮಿತ್ರದ್ರೋಹ ಮಲ್ತಾ ತುಡೆಟ್ ಜೆತ್ತಿನಾಯನಿ ಕೆರ್ಪುಣಿ ದಾನೆ। ಮಹಾ ಪರಾಕ್ರಮೋನೊಂದ್‌ದ್ ಕೇಣ್‌ನಾಗ। ಬೊಕ್ಕೊ ದಾನೆ ಲಕ್ಷೊ ಉಂಡಡಲಾ ಬುಡುದು। ಅರಸು ಮಗೆ ಸಸೆಮಿರಾಂದ್‌ದ್ ಪಣೇತೆ * ಯಿಂಚಿ ತೀರ್ಥೊಂಕುಳೆಡ್। ಸ್ನಾನಾದಿಗುಳೆನಿ ಮಳ್ತ್‌ಂಡಾ। ಬ್ರಂಹ್ಮತ್ಯಾದಿ ಪಾಪೊಳು ಬುಡುದು ಪೋವೊ। ಮಿತ್ರಗ್

ಮಳ್ತಿ ದ್ರೋಹೊ ಬುಡಾಂದ್ । ಆ ರಡ್ಡ್ ಅಕ್ಷರೊನಿ ಬುಡುದು ಪಂಡ್‌ಂಡಾ ।* ಯಿಯಾನಾಲ್ವೇರೆಗ್ ಸೂರ್ಯೆ ಚಂದ್ರೆಕುಲು ಉಪ್ಪುವಿ ಮುಟ್ಟ । ನರಕೊಡು ಉಪ್ಪುವೇರ್।ಂದ್‌ದ್ ಪಂಡ್‌ದ್ * ಅಂದೋ ರಾಜಕುಮಾರ ಯಿಯಾ ಶೋಡಶೊ ಮಹಾದಾನೊ । ಪದಿನಾಜಿ ಮಹಾದಾನೊ ಮಳ್ತ್ಂಡಾ ದುಂಬು ನಿಕ್ಕ್ ಬಹಳ ಸಂಪತ್ತ್ ಕೀರ್ತಿ ಹೆಚ್ಚಾಲೂಂದುದು ಪಣ್‌ನಾಗ । ಯಿಯಾ ಮಗಕ್ ಮರುಳು ಬುಡುದು । ತಾನ್ ಬೋಂಟೆ ನಲಿತ್ಯನ್ಯನಿ ಸಮಗ್ರೊ ಅರಸುಗು ಪಣ್‌ಪುಂಣೆ ಅರಸು ಯಿಯಾ ಕಥೆನಿ ಮಾತ ತೆರಿನಿ ಯೆಂಚಾಂದ್‌ದ್ ಕೇಂಡ್‌ದ್ ಬೊಕ್ಕೊ ಯಿಂಚ ಪಂಡೆ ** ಪಣ್‌ಜಾಲು ಯಿಲ್ಲಾಗ್ ಯಜಮಾನೆಕುಳು ಹೊರತಾಂತೆ । ಕಾಡ್‌ಗ್ ಯಜಮಾನೆಕುಳು ಅತ್ತ್ । ದೃವಾಧೀನೊತ್ತಾವ ಕಾಡ್‌ಗ್ ಪೋದು । ಯಿಯಾ ಮಗೆ ಮರಕ್ । ಮಿತ್ತ್ ಪೋಯಿನಾಲು ಐಡ್ದ್ ಬೊಕ್ಕೊ। ಆ ಮರತ ಮಿತ್ತ್ ಕರಡಿ ಯಿತ್ತಿನಾಲು ಪಂಡೆ । ಬೊಕ್ಕೊ ತಿಳ್ತ್ ಪಿಲಿ ಗೆಡೆತೊಂಡುದು ಬತ್ತ್‌ದ್ ಮರತ ಅಡಿಟ್ ಕುಲುಂಡು । ಐಕ್ ಮಿತ್ರ ದ್ರೋಹ ಮಳ್ತಿನಾಲು । ಆ ಕರಡಿ ಶಾಪ ಕೊರಿನ್ಯನಿ । ಪರಿಹಾರ ಯೆಂಚ ಮಳ್ಪೊಡೂಂದುದು ಕೇನಾಗ ಪಿರಾಲುಡು ವೊರಿ ಮಾಂನ್ಯೆ । ಭಾನುಮತೀನ್ಪಿನಾಳೆ ತಿಲೊಕೊನಿ ಯೆಂಚ ತೂಯೆ । ಆ ಪ್ರಕಾರೊಡು ಯಾನ್ । ಐನಿ ತೂಯೆಂದ್‌ದ್ । ಪಣ್‌ಪುಂಣೆ । ಆ ರಾಯೆ । ಉಂಬೆನೇ ಶರದಾನಂದೆಂದ್‌ದ್ ತೆರಿದ್ । ಆ ತೆರೆಮದೆನಿ ದೆಪ್ಪೊದು । ಕಾರ್‌ಗ್ ನಮಸ್ಕಾರೊನಿ ಮಲ್ಪೊವೊಂಡುದು ಆ ಪ್ರಧಾನಿಗ್ ಪುರೋಹಿತಗ್ ಬೋಡಾಯಿ ವೊಸ್ತುಳೆನಿ ಕೊರುದು ಮಂನಣೆ ಮಳ್ತ್‌ದ್ ಸುಖೊಡು ಯಿತ್ತೆ.

ಅನುಬಂಧ-೨

೨. ವಿಕ್ರಮಾದಿತ್ಯ ಕಥೆತ ಸುರುತ್ತ ಬೊಕ್ಕ ಅಕೇರಿದ ಪುಟೊಕ್ಕುಲೆನ ಸ್ಕ್ಯಾನ್ ಪ್ರತಿ



ವಿಕ್ರಮಾದಿತ್ಯ ಕಥೆತ ಸುರುತ್ತ ಪುಟೊ



ವಿಕ್ರಮಾದಿತ್ಯ ಕಥೆಟ್ ತಿಕ್ಕಿನ ಅಕೇರಿದ ಪುಟೊ

ಡಾ. ಎಂ. ಎಸ್. ದುರ್ಗಾಪ್ರವೀಣ್

ಬೆನೆಟ್ ಜಿ. ಅಮ್ಮನ್ನ

1834ಟ್ಟ್ ತುಳುನಾಡ್‌ಗ್ ಬತ್ತಿ ಬಾಸೆಲ್ ಮಿಶನ್ ಸಂಸ್ಥೆದ ಮಿಶನರಿನಕುಲು ತುಳು ಭಾಷೆಗ್ ಮಳ್ತಿ ಸೇವೆ ಮಲ್ಲವು. ಅಕುಲು ತುಳು ಭಾಷೆನ್ ಕಲ್ತಿನಿ ಮಾತ್ರ ಅತ್ತಂದೆ ತುಳುವ ಸಂಸ್ಕೃತಿದ ದಾಖಲೀಕರಣೊಗು ಅಡಿಪಾಯೊನು ಪಾಡಿನೆನ್ ನಮ ಏಪಲಾ ಮದಪೆರೆ ಸಾಧ್ಯ ಇಜ್ಜಿ. 1841ಟ್ಟ್ ತುಳುನಾಡ್‌ದ ಸುರುತ್ತ ಅಚ್ಚಿದ ಇಲ್ಲಾಯಿ ಬಾಸೆಲ್ ಮಿಶನ್ ಪ್ರೆಸ್‌ಡ್ದ್ ತುಳು ಭಾಷೆ, ಸಂಸ್ಕೃತಿ, ಸಾಹಿತ್ಯೊಳೆನ್ ಅಚ್ಚಿ ಮಲ್ತ್‌ದ್ ಪ್ರಕಟ ಮಳ್ತಿನವು ಇನಿಕ್ಲಾ ಸಂಶೋಧನೆಗ್ ಯೋಗ್ಯಾದುಂಡು. ಬಾಸೆಲ್ ಮಿಶನರಿನಕುಲು ದಾಖಲೆ ಮಳ್ತ್ ದೀತಿನ ಬೊಳ್ಪುಗು ಬರಂದಿ ಬರವುಳೆನ್ ಇತ್ತೆ ಪ್ರಕಟ ಮಲ್ಪುನವು ಪೆರ್ಮೆದ ವಿಚಾರ ಆದುಂಡು.

ಉಂದೆನ್ ಸಂಪಲ್ತಿನಕುಲು ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ ಮುಳ್ತದ ಡಾ.ಎಂ.ಎಸ್. ದುರ್ಗಾಪ್ರವೀಣ್ ಬೊಕ್ಕ ಕರ್ನಾಟಕ ತಿಯೊಲಾಜಿಕಲ್ ಕಾಲೇಜ್, ಕುಡ್ಲದ ಬೆನೆಟ್ ಜಿ. ಅಮ್ಮನ್ನೆರ್. ಈ ಬರವುಲೆಡ್ದ್ ಮಿಶನರಿ ಕಾಲದ ಹಸ್ತಪ್ರತಿಕ್ಕುಲೆ ಸಂಶೋಧನೆಲು ನನಲಾತ್ ದುಂಬರಿಯೆರೆ ಬೊಕ್ಕ ಸಾಹಿತ್ಯ ಸಂಸ್ಕೃತಿದ ಪೊಸ ದೇಕಿದ ಬುಳೆಚ್ಚಿಲ್ ಆವರೆ ಸಾಧ್ಯ ಉಂಡು ಪಂಡ್ದ್ ತೆರಿಯೊನೊಲಿ.

ISBN 978-93-83765-28-
9 789383 765287 >

ಎಮ್. ಜಾನಕಿ ಬ್ರಹ್ಮಾವರ
ಗುರ್ಕಾರ್ರ್
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ